MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com | Yuva Marga | yuva_marga_

# ಯುವ ಮಾರ್ಗ

YUVA MARGA NEWS PAPER — VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

YUVA MARGA KANNADA DAILY NEWS PAPER

ಸಂಪುಟ: 05 | ಸಂಚಿಕೆ: 56 | ಮಂಗಳವಾರ : 16-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 56 | TUESDAY : 16-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಬಳಗಾನೂರು ಪಟ್ಟಣ ಪಂಚಾಯ್ತಿಯ ಜನವಿರೋಧಿ ನಡೆ ಖಂಡಿಸಿ ಕರ್ನಾಟಕ ರೈತ ಸಂಘದಿಂದ ಪ್ರತಿಭಟನೆ.

ಯುವಮಾರ್ಗ ಸುದ್ದಿ



**ಬಳಗಾನೂರು,ಇ.15–** ಪಟ್ಟಣಪಂಚಾಯ್ತಿ ಆಡಳಿತದ ನಿರ್ಲಕ್ಷ್ಯ,ಭ್ರಷ್ಟಾಚಾರ,ಮತ್ತು ಜನವಿರೋಧಿ ನಡೆಯವಿರುದ್ದ ಕರ್ನಾಟಕ ರಾಜ್ಯ ರೈತಸಂಘ ತಾಲೂಕಾ ಘಟಕ ಮಸ್ಕಿಯ ವತಿಯಿಂದ ಸೋಮವಾರ ಬೆಳಿಗ್ಗೆ ಮಸ್ಕಿಯ ಡಾಕ್ಟರ್,ಬಿ,ಆರ್, ಅಂಬೇಡ್ಕರ ಪುತ್ತಳಿಯ ಮುಂಭಾಗ ಪ್ರತಿಭಟನೆ ಮಾಡಿದರು.

ಈ ವೇಳೆ ಮಾತನಾಡಿದ ಸಿ,ಪಿ,ಐ,ಎಮ್, ಎಲ್,ರೆಡ್ ಸ್ಟಾರ್ ನ ರಾಜ್ಯಸಮಿತಿಯ ಸದಸ್ಯ ಎಮ್,ಗಂಗಾಧರ್ ಬುದ್ದಿನ್ನಿ ಬಳಗಾನೂರು ಪಟ್ಟಣ ಪಂಚಾಯ್ತಿ ಅವ್ಯವಸ್ಥೆಯ ಆಗರವಾಗಿದೆ 509 ಸರ್ವೆ ನಂಬರಿನ ಜಮೀನಿನಲ್ಲಿ ಹಲವಾರು ಕುಟುಂಭಗಳು ವಾಸಮಾಡುತ್ತಿದ್ದಾರೆ,ಆದರೆ ಖಾಸಗಿ ವ್ಯಕ್ತಿಗಳು ಪಶ್ಚಿಮಕ್ಕಿರುವ ಐದು ಅಡಿ ರಸ್ತೆಯನ್ನು ವಿನಾಕಾರಣ ಬಂದ್ ಮಾಡಿ ನಿವಾಸಿಗಳ ಓಡಾಟಕ್ಕೆ ತೊಂದರೆ ನೀಡುತ್ತಿದ್ದಾರೆ,ಇದನ್ನು ಕೂಡಲೆ ಸ್ಥಳಪರಿಶೀಲನೆ ಮಾಡಿ ಸರಿಪಡಿಸಬೇಕು.

ಬಸವೇಶ್ವರ ನಗರದಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಿಸಬೇಕು ಹಾಗೂ ಹೈಟೆಕ್ ಶೌಚಾಲಯ ನಿರ್ಮಿಸಬೇಕು. ಪರಿಸರ,ಜನ,ಜಾನುವಾರುಗಳಿಗೆ ಕಂಟಕವಾಗಿರುವ ಬುದ್ದಿನ್ನಿ ಮತ್ತು ಜಾಲ ವಾಡಗಿಯುಲ್ಲಿನ ಅಕ್ರಮ ಮರಳು ಗಣಿಗಾರಿಕೆಗೆ ಪೂರ್ಣವಿರಾಮವಿಡಬೇಕು.


ಚರಂಡಿ,ರಸ್ತೆ ಬದಿಯು ತಿಪ್ಪೆಗಳು, ಶುದ್ಧಕುಡಿಯುವ ನೀರಿನ ಸರಬರಾಜು, ಆಸ್ಪತ್ರೆಯ ಪಕ್ಕದ ಬಯಲು ಶೌಚಾಲಯದ ತೆರವು,ಪಟ್ಟಣ ಪಂಚಾಯ್ತಿಯ ಲಂಚಾವತಾರ,ಬೀದಿದೀಪಗಳ ಅಳವಡಿಕೆ,ಸ್ವತಹ ಪಟ್ಟಣ ಪಂಚಾಯ್ತಿಯೇ ಊರಿನ ಕಸವನ್ನೆಲ್ಲ ಹಳ್ಳದಲ್ಲಿ ಹಾಕುತ್ತಿರುವುದನ್ನು ನಿಲ್ಲಿಸಬೇಕು,

ಬಯಲು ಶೌಚಾಲಯ ಮುಕ್ತ ಮಾಡಬೇಕು,ಕ್ಯಾಂಪ್‌ಗಳ ಮನೆಗಳನ್ನು ಡಿಮ್ಯಾಂಡಿನಲ್ಲಿ ಸೇರಿಸಬೇಕು ಇಲ್ಲವಾದರೆ ಕರ್ನಾಟಕ ರೈತಸಂಘ A,I,K,K,S, ನ ನೇತೃತ್ವ ದಲ್ಲಿ ತಹಸಿಲ್ ಕಾರ್ಯಾಲಯದ ಮುಂದೆ ಉಗ್ರಹೋರಾಟ ಹಮ್ಮಿಕೊಳ್ಳಬೇಕಾ ಗುತ್ತದೆಂದು ಎಚ್ಚರಿಸಿ ತಹಸಿಲ್ದಾರ್ ಮಂಜುನಾಥ ಬೋಗಾವತಿಯುವರಿಗೆ ಮನವಿ ಪತ್ರವನ್ನು ನೀಡಿದರು. ಇದಕ್ಕೂ ಮೊದಲು ಕರ್ನಾಟಕ ರೈತಸಂಘದ ಪ್ರಧಾನಕಾರ್ಯದರ್ಶಿ ಮಾರುತಿ ಜಿನ್ನಾಪೂರು,ಹೋರಾಟಗಾರ ಬಸವರಾಜ ಎಕ್ಕಿ ಮಾತನಾಡಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಬೃಹತ್ ಹೋರಾಟದ ಎಚ್ಚರಿಕೆ ನೀಡಿದರು.

ಈ ಪ್ರತಿಭಟನೆಯುಲ್ಲಿ ಕರ್ನಾಟಕ ರೈತಸಂಘದ ಮಸ್ಕಿ ತಾಲೂಕಾ ಅಧ್ಯಕ್ಷ ಸಂತೋಷ ಹಿರೇದಿನ್ನಿ,ತಾಲೂಕಾ ಕಾರ್ಯದರ್ಶಿ ವೆಂಕಟೇಶ ನಾಯಕ, ಹುಲುಗಪ್ಪ,ಶಾಂತಮೂರ್ತಿ, ಮರಿ ಯಪ್ಪ, ದುರುಗಪ್ಪ,ಶರಣಪ್ಪ,ಶಿವಣ್ಣ, ಹನುಮಂತ,ಹುಚ್ಚಪ್ಪ,ಯಂಕಪ್ಪ ಸೇರಿದಂತೆ ಹಲವು ಹೋರಾಟಗಾರರು ಭಾಗವಹಿಸಿದ್ದರು.

## ಆಧುನಿಕ ವಚನಗಳ ಸಂಕಲನ ನುಡಿನೈವೇದ್ಯ ಕೃತಿ ಲೋಕಾರ್ಪಣೆ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.15–** ಪಟ್ಟಣದ ಗ್ಯಾಲಾಕ್ಸಿ ಮೀಟಿಂಗ್ ಹಾಲ್ ನಲ್ಲಿ ನಡೆದ ಸುವರ್ಣ ಗಿರಿ ಪ್ರಕಾಶನ ಮಾನ್ವಿ ರವರ ಪ್ರಕಾಶನದ ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿಯನ್ನು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಮಹಾಂತೇಶ ಮಸ್ಕಿ ಲೋಕಾರ್ಪಣೆ ಗೊಳಿಸಿ ಮಾತನಾಡಿ 12 ನೇ ಶತಮಾನದಲ್ಲಿ ಬದುಕಿಗೆ ಬೇಕಾಗಿರುವ ಬದುಕಿನಲ್ಲಿ ನುಡಿಯುವುದನ್ನೆ ನಡೆಯಾಗಿಸಿಕೊಂಡು ಬರೆದ ಸಾಹಿತ್ಯ ಪ್ರಕಾರವನ್ನು ವಚನಗಳೇಂದು ಕರೆಯುಲಾಯಿತು ಅಂದಿನ ದಿನಗಳಲ್ಲಿ ಅನೇಕರು ತಮ್ಮ ಬದುಕಿನಲ್ಲಿ ಕಂಡ ಅನುಭವಿಸಿದ ನೋವುಗಳು,ಪ್ರಸಂಗಗಳು ಪಲ್ಲಟಗೊಂಡು ವಚನಗಳ ರೂಪದಲ್ಲಿ ಬರುವುದಕ್ಕೆ ಸಾಂಸ್ಕೃತಿಕ ನಾಯಕರೆಂದು ಕರೆಸಿಕೊಳ್ಳುವ ವಿಶ್ವಗುರು ಬಸವಣ್ಣನವರು ಒಂದು ಸಮೂಹವನ್ನು ಒಗೂಡಿಸಿಕೊಂಡು ಸಾಗಿರುವುದರಿಂದಲೇ ಸಾಧ್ಯವಾಗಿದೆ ಶರಣರ ವಚನಗಳನ್ನು ಸ್ಪೂರ್ತಿಯಾಗಿ ಮಾಡಿಕೊಂಡು ಅಧುನಿಕ ವಚನಗಳನ್ನು ರಚನೆ ಮಾಡುವುದಕ್ಕೆ ಸಾಹಿತಿ ಸಿದ್ದಲಿಂಗಯ್ಯನವರು ನಾಂದಿ ಹಾಡಿದನಂತರ ಅನೇಕ ಸಾಹಿತಿಗಳು ಅಧುನಿಕ ದೃಷ್ಟಿಕೋನದಿಂದ ವಚನಗಳನ್ನು ರಚಿಸಿದ್ದರೆ ಅದ್ದರೆ ಅವುಗಳಲ್ಲಿ ಅನುಭವದ ಹಾದಿಯಲ್ಲಿ ಬರೆದ ವಚನಗಳು ಮನಸ್ಸಿಗೆ ತಟ್ಟುವಲ್ಲಿ ಯಶಸ್ವಿಯಾಗುತ್ತವೆ. ಅದ್ದರಿಂದ ಸಾಹಿತಿಗಳು ವಚನಗಳನ್ನು ಕಟ್ಟುವಾಗ ಯಾವ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದೆ ತಮ್ಮ ಅನುಭವಗಳಿಂದ ಬರೆದಾಗ ಮಾತ್ರ ಜನರಿಗೆ ತಲುಪುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ದಿವ್ಯಸಾನಿಧ್ಯವನ್ನು ವಹಿಸಿ ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಾಚನ ನೀಡಿ ಶರಣರು ಜಗತ್ತಿನಲ್ಲಿ ಎಲ್ಲಾವನ್ನು ಹೇಳುವುದನ್ನೇಲ್ಲ ಹೇಳಿದ್ದಾರೆ. ಅದ್ದರೆ ಇಂದು ಅವುಗಳ ಪಾಲನೆ ಮಾತ್ರ ಅಗಬೇಕಾಗಿದೆ ಇಂದು ನಮ್ಮ ಜೀವನದಲ್ಲಿ ಉತ್ತಮವಾಗಿ ಏಕೆ ಬದುಕವುದಕ್ಕೆ ಅಗುತ್ತಿಲ್ಲ ಎನ್ನುವ ವಿಷಯವನ್ನಿಟ್ಟು ಕೊಂಡೆ ವಚನಗಳು ಹುಟ್ಟಿಕೊಂಡವು,ಸಾಹಿತ್ಯ ಹುಟ್ಟಿಕೊಂಡವು, ಎಲ್ಲಿಯವರೆಗೂ ನಮ್ಮಲ್ಲಿ ಆಸೆಯೆನ್ನುವುದು ಅಳಿಯುವುದಿಲ್ಲವೇ. ಪ್ರಕೃತಿ ಜೋತೆ ಜೋತೆಗೆ ಬದುಕುವುದನ್ನು ಎಲ್ಲಿಯವರೆಗೂ ಕಲಿಯುವುದಿಲ್ಲವೋ.

(2ನೇ ಪುಟಕ್ಕೆ)

## ರೂ. 6ಲಕ್ಷ ಬಾಕಿ ವಸೂಲಿ ಹಿನ್ನೆಲೆಯಲ್ಲಿ ಸಾಮಾಗ್ರಿಗಳ ಜಪ್ತಿ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.15–** ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿಯಲ್ಲಿನ ಪಿಠೋಪ'ಕರಣಗಳನ್ನು ನ್ಯಾಯಾಲಯದ ಅದೇಶದಂತೆ ಸೋಮವಾರ ಜಪ್ತಿ ಮಾಡಲಾಯಿತು.

ತಾಲೂಕಿನ ಉಟಕನೂರು ಗ್ರಾಮ ಪಂಚಾಯಿತಿಗೆ ಅಂದಾಜು 6ಲಕ್ಷಕ್ಕೂ ಅಧಿಕ ಮೌಲ್ಯದ ಅಗತ್ಯವಿರುವ ಸಾಮಾಗ್ರಿಗಳನ್ನು ಪೋತ್ನಾಳ ಗ್ರಾಮದ ಬಾಲಾಜಿ ಹಾರ್ಡವೇರ್ ಅಂಗಡಿಯಿಂದ ಖರೀದಿಸಲಾಗಿತ್ತು ಖರೀದಿ ಮಾಡಿದ ಸಾಮಾಗ್ರಿಗಳಿಗೆ ಹಣವನ್ನು ಪಾವತಿಸುವಂತೆ ಸಾಮಾಗ್ರಿಗಳನ್ನು ಪೂರೈಸಿದ ಅಂಗಡಿ ಮಾಲಿಕರಾದ ರಾಮಕೃಷ್ಣರವರು ಅನೇಕ ಬಾರಿ ಉಟಕನೂರು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು ಕೂಡ ಅಧಿಕಾರಿಗಳು ಸ್ಪಂದಿಸದೆ ಇರುವುದರಿಂದ ಅಂಗಡಿ ಮಾಲಿಕರಾದ ರಾಮ ಕೃಷ್ಣರವರು ಮಾನ್ವಿ ನ್ಯಾಯಾಲಯಕ್ಕೆ ತಮ್ಮ ಪರವಾಗಿ ವಕೀಲರಾದ ವೀರನಗೌಡ ಪೋತ್ನಾಳ್ ರವರ ಮೂಲಕ ಮೋರ'ಹೋಗಿದ್ದರಿಂದ ಇವರ ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯವು ಹಣಪಾವತಿಸುವಂತೆ ಅದೇಶ ನೀಡಿದರು ಕೂಡ ಹಣ ಪವಾತಿ ಮಾಡದೆ ಇರುವುದರಿಂದ ಮಾನ್ವಿ ಕಳೆದ ತಿಂಗಳು ಉಟಕನೂರು ಗ್ರಾಮ ಪಂಚಾಯಿತಿ ಕಚೇರಿಯ ಪಿಠೋಪಕರಣಗಳನ್ನು ಜಪ್ತಿ ಮಾಡುವಂತೆ ಅದೇಶ ನೀಡಿ ಗ್ರಾ.ಪಂ. ಕಚೇರಿಯ ಪಿಠೋಪಕರಣಗಳನ್ನು ವಶ ಪಡಿಸಿ ಕೊಂಡರು ಕೂಡ ಗ್ರಾಮ ಪಂಚಾಯಿತಿಯಿಂದ ಅಂಗಡಿ ಮಾಲಿಕರಿಗೆ ಹಣ ಪಾವಾತಿ ಮಾಡದೆ ಇರುವುದರಿಂದ ಇಂದು ನ್ಯಾಯಾಲಯವು ತಾಲೂಕು ಪಂಚಾಯಿತಿ ಕಚೇರಿಯಲ್ಲಿರು ಎಲ್ಲಾ ಪಿಠೋಪಕರಣ ಗಳನ್ನು, ಗಣಕಯಂತ್ರಗಳನ್ನು,ಇತರ ಸಾಮಾಗ್ರಿಗಳನ್ನು ಜಪ್ತಿ ಮಾಡುವಂತೆ ಅದೇಶ ನೀಡಿದರಿಂದ ಅಂಗಡಿ ಮಾಲಿಕರು, ನ್ಯಾಯಾಲಯದ ಸಿಬ್ಬಂದಿಗಳು,ವಕೀಲರ ಸಮ್ಮುಖದಲ್ಲಿ ಜಪ್ತಿ ಮಾಡಿಕೊಂಡು ನ್ಯಾಯಾಲಯದ ವಶಕ್ಕೆ ನೀಡಲಾಯಿತು.

## ವೀರಶೈವ ಲಿಂಗಾಯತ ಸಮಾಜದಿಂದ ಡಾ.ಶಾಮನೂರ ಶಿವಶಂಕರಪ್ಪ ನವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.15–** ಪಟ್ಟಣದ ಬಸವ ವೃತ್ತದಲ್ಲಿ ವೀರಶೈವ ಲಿಂಗಾಯತ ಸಮಾಜದ ಹಿರಿಯ ಚೇತನ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷರಾದ ಡಾ.ಶಾಮನೂರ ಶಿವಶಂಕರಪ್ಪ ರವರು ಲಿಂಗೈಕ್ಯರಾಗಿರುವ ಹಿನ್ನೆಲೆಯಲ್ಲಿ ತಾಲೂಕು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಾಲೂಕ ವೀರಶೈವ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್ ಮಾತನಾಡಿ ಡಾ.ಶಾಮನೂರ ಶಿವಶಂಕರಪ್ಪ ರವರಂತಹ ಮುತ್ಸದಿಗಳನ್ನು ಹಾಗೂ ಸಮಾಜದ ಹಿತಚಿಂತಕರನ್ನು ಕಳೆದುಕೊಂಡು ವೀರಶೈವ ಲಿಂಗಾಯತ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಅವರ ಅತ್ಮಕ್ಕೆ ಶಿವ ಶಾಂತಿಯನ್ನು ನೀಡಲಿ ಎಂದು ತಿಳಿಸಿದರು.

ಡಾ.ಶಾಮನೂರ ಶಿವಶಂಕರಪ್ಪನವರ ಅತ್ಮಕ್ಕೆ ಶಾಂತಿ ಕೋರಿ ಸಮಾಜದ ನೂರಾರು ಜನರು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಮೌನಾಚಾರಣೆ ನಡೆಸಿದರು.

ತಾಲೂಕ ವೀರಶೈವ ಸಮಾಜದ ತಾ. ಕಾರ್ಯಾಧ್ಯಕ್ಷರಾದ ಶ್ರೀಧರ್ ಸ್ವಾಮಿ , ಪ್ರಧಾನ ಕಾರ್ಯದರ್ಶಿಗಳಾದ ಜಗದೀಶ್ ಓತೂರ್, ಮುಖಂಡರಾದ ವೀರನಗೌಡ ಸಂಗಪುರ್, ಮಲ್ಲಿಕಾರ್ಜುನ್ ಗೌಡ ಗಣೆಕಲ್, ಬಸವರಾಜಪ್ಪ ಗೌಡ ಚಿಮಲಾ ಪುರ್, ರಾಮನಗೌಡ ಹೀರಾ,ಅಮ ರೇಗೌಡ ಉಮಳಿಹೊಸೂರ್, ಜೆ.ಸುಧಾಕರ್, ಶ್ರೀಶೈಲ್‌ಗೌಡ , ಗುರುಸಿದ್ದಪ್ಪಗೌಡ ಕಣ್ಣೂರು, ಹೊಯ್ಸಳ ಸ್ವಾಮಿ, ಲೋಕನಾ ಥ್ , ವಿರುಪಾಕ್ಷಿಗೌಡ, ಬಸವನಗೌಡ ಕರವೇ, ಹೊಸಕೋಟಿ ಶರಣಪ್ಪ, ಮೌನೇಶ, ಚಂದ್ರಪ್ಪ ಗೌಡ ಚಿಕ್ಕಲಪರವಿ, ವಿರುಪಣ್ಣ ,ಮಲ್ಲಭದ್ರಗೌಡ, ಶಶಿಧರ್ ಗೌಡ, ರುದ್ರಮುನಿ ಸ್ವಾಮಿ, ಸುರೇಶ್ ನಾಡಗೌಡ, ವಿ.ಟಿ. ಶರಣ, ಹಂಪನಗೌಡ, ರಾಜುಸ್ವಾಮಿ, ವೀರಭದ್ರಪ್ಪ ಬಣಕಾರ್, ಸಿ.ರಾಜು ಇದ್ದರು.

## ದುಗನೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ

ಯುವಮಾರ್ಗ ಸುದ್ದಿ




**ರಾಯಚೂರು,ಡಿ.15–** ರಾಯಚೂರು ತಾಲ್ಲೂಕಿನ ದುಗನೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ ನೀಡಿ, ಮಕ್ಕಳಿಗೆ ಪೌಷ್ಟಿಕ ತೋಟದ ಮಹತ್ವದ ಕುರಿತು ಬೇಸಾಯಿ ಶಾಸ್ತ್ರ ವಿಭಾಗದ ವಿಜ್ಞಾನಿ ಡಾ.ಮಲ್ಲರೆಡ್ಡಿ ಅವರು ತಿಳಿಸಿದರು.ಮನುಷ್ಯನ ಜೀವನಕ್ಕೆ ಬಹಳ ಮುಖ್ಯವಾದುದ್ದು, ಆರೋಗ್ಯ ಇದರ ರಕ್ಷಣೆ ಪೌಷ್ಟಿಕ ಆಹಾರದಿಂದ ಸಾಧ್ಯ ಹಾಗಾಗಿ ಪೌಷ್ಟಿಕ ತೋಟ ಬೆಳಸುವುದು ಬಹಳ ಪ್ರಮುಖವಾಗಿದೆ.ಈ ವೇಳೆ ಹಿರಿಯ ಕೃಷಿ ವಿಜ್ಞಾನಿಗಳಾದ ಡಾ.ಹೇಮಲತಾ ಅವರು ಮಕ್ಕಳಿಗೆ ತೋಟದ ತಯಾರಿ ಹೇಗೆ ಮಾಡಿಕೊಳ್ಳಬೇಕು ಎಂದು ಪ್ರಾತ್ಯಕ್ಷೆಯನ್ನು ಮಾಡಿ ಮಾರ್ಗದರ್ಶನ ಮಾಡಿದರು.ಈ ವೇಳೆ ಕೀಟಶಾಸ್ತ್ರದ ವಿಜ್ಞಾನಿಗಳಾದ ಡಾ.ಶ್ರೀವಾಣಿ ಅವರು ಕೀಟಗಳ ಕುರಿತು ಅದರಲ್ಲಿ ವಿಶೇಷವಾಗಿ ಜೇನಿನ ಹುಳುಗಳ ಮಾಹಿತಿಯನ್ನು ನೀಡಿ ಮಕ್ಕಳಿಗೆ, ಮಕರಂದ ಎಲ್ಲಿ ಇರುತ್ತೆ, ಜೇನು ನೊಣ ಮಕರಂದವನ್ನು ಯಾವ ವಿಧದಲ್ಲಿ ಹುಡುಕುತ್ತವೆ ಎಂದು ಚಟುವಟಿಕೆ ಮೂಲಕ ವಿವರಿಸಿದರು.ಈ ವೇಳೆ ಆಹಾರ ಸಂಸ್ಕರಣೆ ವಿಭಾಗದ ವಿಜ್ಞಾನಿಗಳಾದ ಡಾ.ವೀಣಾ ಅವರು ಶುದ್ಧ ಮತ್ತು ಸಂಸ್ಕರಣೆಯ ಆಹಾರ ನಿತ್ಯ ಜೀವನಕ್ಕೆ ಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳಾದ ಗಫೂರ್, ಸಹಶಿಕ್ಷಕರಾದ ಚಂದ್ರಶೇಖರ್ ನಾಯ್ಕ್. ಸಂಪತರಾಜ್,ಪುಲಿ ಅಂಜಿನೇಯ್ಯ, ಮಲ್ಲೇಶ, ನರೇಶ ಕುಮಾರ್, ನವೀನ್ ಕುಮಾತ್, ಮಹೇಶ ಕುಮಾರ್ ಸೇರಿದಂತೆ ಇತರರು ಇದ್ದರು

## ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ ಮಹತ್ವದ್ದು: ಡಾ.ಈರಣ್ಣ ಕೋಸಗಿ

ಯುವಮಾರ್ಗ ಸುದ್ದಿ



**ರಾಯಚೂರು,ಡಿ.15–** ತಾಲೂಕು ಆಡಳಿತ, ತಾಲೂಕು ಪಂಚಾಯತ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ರಾಯಚೂರು ತಾಲೂಕಾ ಮಟ್ಟದ ಪ್ರಬಂಧ ಸ್ಪರ್ಧೆ ಕಾರ್ಯಕ್ರಮವು ನಗರದ ಹಾಶ್ಮಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಯಿತ್ತು.

ಕಾರ್ಯಕ್ರಮಕ್ಕೆ ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಡಾ. ಈರಣ್ಣ ಕೋಸಗಿ ಅವರು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ, ಅವರು ಮಾತನಾಡಿ, ಚುನಾವಣೆಯ ಸಂದರ್ಭದಲ್ಲಿ ಒಂದೊಂದು ಮತವು ಅತ್ಯಮೂಲ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿಯ ಮೂಡಿಸಲು ಪ್ರತಿ ವರ್ಷ ರಾಷ್ಟ್ರೀಯ ಮತದಾರ ದಿನಾಚರಣೆ ಹಿನ್ನಲೆಯಲ್ಲಿ ಹಲವಾರು ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಭಾಗವಹಿಸಬೇಕು. ವಿದ್ಯಾರ್ಥಿಗಳು ಜಿಲ್ಲಾ, ರಾಜ್ಯಮಟ್ಟಕ್ಕೆ ಆಯ್ಕೆ ಆಗುವುದರ ಮೂಲಕ ರಾಯಚೂರು ತಾಲೂಕಿಗೆ ಕೀರ್ತಿ ತರಬೇಕೆಂದರು.

ಈ ವೇಳೆ ಮತದಾರರ ಸಾಕ್ಷರತಾ ಕ್ಲಬ್ ಜಿಲ್ಲಾ ನೂಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ್ ಅವರು ಮಾತನಾಡಿ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಲಿಖಿತ ಸಂವಿಧಾನ ಹೊಂದಿರುವಂತಹ ದೇಶ. ನಮ್ಮ ದೇಶದಲ್ಲಿ ಜನನಾಯಕನ ಆಯ್ಕೆ ಮಾಡಲು ಮತದಾನದ ಮೂಲಕ ಆಯ್ಕೆ ಮಾಡುತ್ತಿರುವುದು ತಮಗೆಲ್ಲ ತಿಳಿದಿರುವ ವಿಷಯ. ಈ ಒಂದು ಪ್ರಬಂಧ ಸ್ಪರ್ಧೆಯನ್ನು ಶಾಲಾ ಮಟ್ಟದಲ್ಲಿ ಮುಖ್ಯ ಗುರುಗಳು ನೇತೃತ್ವದಲ್ಲಿ ನಡೆಯುತ್ತದೆ. ತಾಲೂಕ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಮಾರ್ಗದರ್ಶನದಲ್ಲಿ ನಡೆಯುತ್ತದೆ. ವಿದ್ಯಾರ್ಥಿಗಳು ಈ ಒಂದು ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಆಯ್ಕೆ ಮಾಡಲಾಗುತ್ತದೆ ಎಂದರು.

ಜಿಲ್ಲಾ ಮಟ್ಟಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದಂತ ವಿದ್ಯಾರ್ಥಿಗಳ ಹೆಸರನ್ನ ಕಳಿಸಿಕೊಡಲಾಗುತ್ತದೆ. ತಾಲೂಕ ಜಿಲ್ಲಾ ಮತ್ತು ರಾಜ್ಯ ಮಟ್ಟಕೆ ಆಯ್ಕೆ ಆದಂತಹ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮತದಾರ ದಿನಾಚರಣೆ ದಿನದಂದು ಪ್ರಶಸ್ತಿ ಪತ್ರ ಮತ್ತು ಬಹುಮಾನವನ್ನು ಕೊಟ್ಟು ಗೌರವಿಸಲಾಗುವುದು ಎಂದರು. (2ನೇಪುಟಕ್ಕೆ..)

ಯುವ ಮಾರ್ಗ
www.yuvamarga.com Yuva Marga yuva_marga_

ಮೊದಲನೇಯ ಪುಟದಿಂದ

# ಆಧುನಿಕ ವಚನಗಳ ಸಂಕಲನ ನುಡಿನೈವೇದ್ಯ ಕೃತಿ ಲೋಕಾರ್ಪಣೆ

ಅಲ್ಲಿಯವರೆಗೆ ನಾವು ಸುಂದರವಾದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಮಗೆ ವಚನಗಳು ತಿಳಿಸುತ್ತವೆ ಎಂದು ತಿಳಿಸಿದರು.

ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಆಶೀರ್ವಾಚನ ನೀಡಿದರು. ಆಧುನಿಕ ವಚನಗಳ ಸಂಕಲನ ನುಡಿ ನೈವೇದ್ಯ ಕೃತಿಯ ಕುರಿತು ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಪರಿಚಯಿಸಿದರು.

ಕೃತಿಯ ಲೇಖಕರಾದ ಡಾ.ಚಂದ್ರಶೇಖರ ಸುವರ್ಣಗಿರಿ ಮಠ ತಮ್ಮ ಕೃತಿಯ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಸ್ಕಿಯ ವೈದ್ಯರಾದ ಡಾ.ಶಿವಶರಣಪ್ಪ ಇತ್ಲಿ, ಜಿಲ್ಲಾ ಕಸಾಪ ಗೌರವ ಅಧ್ಯಕ್ಷರಾದ ತಾಯಪ್ಪ ಬಿ.ಹೊಸೂರು, ಕ.ಸಾ.ಪ.ತಾ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಮಾಜಿ ಅಧ್ಯಕ್ಷರಾದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ಸಿಂಧನೂರು ಮಾಜಿ ಕ.ಸಾ.ಪ.ತಾ.ಅಧ್ಯಕ್ಷರಾದ ಪಂಪಯ್ಯಸ್ವಾಮಿ ಸಾಲಿಮಠ, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಗಿರೆಯ್ಯಪಾಟೀಲ್,ಬೆಂಗಳೂರಿನ ನ್ಯೂರೋಸರ್ಜನ್ ಡಾ.ಚೈತನ್ಯ ಪ್ರಭು, ಶಂಕ್ರಪ್ಪ ಚಿಕ್ಕಗೌಡರ ಮಾಟಮಾರಿ, ಪ್ರಕಶಕರಾದ ರಾಚಮ್ಮ ಸಾಂಬಯ್ಯಸ್ವಾಮಿ, ತ್ರಯಂಬಕೇಶ ಮೇದಾ ಸೇರಿದಂತೆ ಇನ್ನಿತರರು ಇದ್ದರು.

# ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ ಮಹತ್ವದ್ದು: ಡಾ.ಈರಣ್ಣ ಕೋಸಗಿ

ಈ ವೇಳೆ ಹಾಸ್ಮಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಮಹದೇವಪ್ಪ ಮಿರ್ಜಾಪುರ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ, ಮತದಾನದ ಬಗ್ಗೆ ಜೊತೆಗೆ ರಾಷ್ಟ್ರೀಯ ಮತದಾರರ ದಿನಾಚರಣೆಯ ವಿಷಯ ತಿಳಿದುಕೊಳ್ಳಲು ಇದು ಅತ್ಯುತ್ತಮ ಕಾರ್ಯಕ್ರಮ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ತಾಲೂಕ ಮತದಾರ ಸಾಕ್ಷರತಾ ಕ್ಲಬ್ ನೋಡಲ್ ಸಂಯೋಜಕ ಸಿ.ಪಿ.ಓದಿಸೋಮಠ, ಶಿಕ್ಷಣ ಸಂಯೋಜಕ ರಾಘವೇಂದ್ರ, ಶಿಕ್ಷಕರಾದ ಸೌಮ್ಯಶ್ರೀ, ವೆಂಕಟೇಶ ನವಲಿ ಸೇರಿದಂತೆ ತಾಲ್ಲೂಕಿನ ವಿವಿಧ ಪ್ರೌಢ ಶಾಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

# ದೇವದುರ್ಗ: ಇಂದು ವಿದ್ಯುತ್ ವ್ಯತ್ಯಯ

**ದೇವದುರ್ಗ,ಡಿ.15–** 16/12/2025 ಮಂಗಳವಾರ ದಂದು ಬೆಳಿಗ್ಗೆ 10:00 ಗಂಟೆಯಿಂದ ಸಾಯಂಕಾಲ 05:00 ಗಂಟೆಯವರೆಗೆ ವಿದ್ಯುತ್ ಸರಭರಾಜನಲ್ಲಿ ವ್ಯತ್ಯಾಯವಾಗಲಿದ್ದು ಈ–26/೦ಇಇ/ಒ/ಒಗಖಖ/ಆಆಉ/2025–26/121–22 ಆಚಿಣಜ: 09/12/2025. ಉಲ್ಲೇಖಕ್ಕೆ ಸಂಬಂಧಿಸಿದಂತೆ, 110/33/11 ಕೆ.ವಿ ಉಪ–ಕೇಂದ್ರ ದೇವದುರ್ಗದಲ್ಲಿ 33 ಕೆ.ವಿ ಹಾಗೂ 11 ಕೆ.ವಿ ಬ್ಯಾಂಕ್ 01 ಮತ್ತು ಬ್ಯಾಂಕ್ 02ರ ಸ್ವೀಚ್‌ಗೇರಗಳ ರಿಪೇರಿ ತುರ್ತು ಕೆಲಸ ಇರುವುದರಿಂದ ಹಾಗೂ ಪರಿವರ್ತಕಗಳ ಇತರೆ ಉಪಕರಣಗಳ ಉಸ್ತುವಾರಿ ನಿರ್ವಹಣೆ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ದಿನಾಂಕ:16/12/2025 ಮಂಗಳವಾರ ದಂದು ಬೆಳಿಗ್ಗೆ 10:00 ಗಂಟೆಯಿಂದ ಸಾಯಂಕಾಲ 05:00 ಗಂಟೆಯವರೆಗೆ ವಿದ್ಯುತ್ ಸರಬರಾಜುನಲ್ಲಿ ವ್ಯತ್ಯಾಯವಾಗುತ್ತದೆ. ಆದ್ದರಿಂದ ಎಲ್ಲಾ ವಿದ್ಯುತ್ ಗ್ರಾಹಕರು ಸಹಕರಿಸಲು ಕೋರಲಾಗಿದೆ.

**ವಿದ್ಯುತ್ ವ್ಯತ್ಯಾಯವಾಗುವ ಪ್ರದೇಶಗಳು–** 33 ಕೆ.ವಿ ಜಾಲಹಳ್ಳಿ : ಜಾಲಹಳ್ಳಿ, ಬುಂಕಲದೊಡ್ಡಿ, ಎರಗುಡ್ಡ. ಲಿಂಗದಹಳ್ಳಿ, ಹೆಚ್.ಸಿದ್ದಾಪುರ, ಚಿಂಚೋಡಿ, ಬಸ್ಸಾಪುರ, ಮತ್ತು ಸುತ್ತ ಮುತ್ತಲಿನ ಹಳ್ಳಿಗಳು.33 ಕೆ.ವಿ ಕೊಪ್ಪರ: ಕೊಪ್ಪರ, ಅರಶಿಣಗಿ, ಕುರ್ಕಿಹಳ್ಳಿ, ರಾಮನಾಳ, ಗುಂಡುಗುರ್ತಿ, ಮತ್ತು ಸುತ್ತ ಮುತ್ತಲಿನ ಹಳ್ಳಿಗಳು.33 6.2 ಡಿ ರಕೇರಾ, ಜುಟಮರಡಿ, ಮುಷ್ಟೂರು, ಪಿಲ್ಲಿಗುಂಡ, ಕ್ಯಾದಿಗೇರಾ, ಮಲ್ಲದೇವರಗುಡ್ಡ, ನಾಗಡದಿನ್ನಿ, ಜಿ.ಜಾಡಲದಿನ್ನಿ, ಮತ್ತು ಸುತ್ತ ಮುತ್ತಲಿನ ಹಳ್ಳಿಗಳು.33 ಕೆ ವಿ. ಗಾಣದಾಳ : ಕಮಲದಿನ್ನಿ, ಕಕ್ಕಲದೊಡ್ಡಿ, ಮ್ಯಾಕಲದೊಡ್ಡಿ, ಸೋಮನಮರಡಿ, ಬಿ.ಆರ್ ಗುಂಡ, ಮತ್ತು ಸುತ್ತ ಮುತ್ತಲಿನ ಹಳ್ಳಿಗಳು.33 ಕೆ.ವಿ ಕೆ.ಇರಬಗೇರಾ: ಕೆ.ಇರಬಗೇರಾ, ಕೊತ್ತದೊಡ್ಡಿ, ಹೆಮನೂರು, ಕೊತಿಗುಡ್ಡ, ವಾನಸಗಲ್, ಕಾಟಮಳ್ಳಿ, ಬೆಂಚಮರಡಿ, ನಾರಾಯಣ ನಾಯ್ಕ ತಾಂಡ, ಮತ್ತು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ದೇವದುರ್ಗ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಅಲಬನೂರು ಗ್ರಾಮ ಪಂಚಾಯಿತಿಯಲ್ಲಿ ರೋಜ್ ಗಾರ ದಿವಸ ಆಚರಣೆ.



ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.15–** ಸಿಂಧನೂರು ತಾಲೂಕಿನ ಅಲಬನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕನ್ನಾರಿ ಗ್ರಾಮದ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಗ್ರಾಮದ ನರೇಗಾ ಯೋಜನೆಯ ಕೂಲಿ ಕಾರ್ಮಿಕರೊಂದಿಗೆ ರೋಜ್ ಗಾರ್ ದಿವಸ ಆಚರಣೆ ಜೊತೆಗೆ ಎನ್.ಎಮ್.ಎಮ್.ಎಸ್. ತಂತ್ರಾಂಶದಲ್ಲಿ ಕಡ್ಡಾಯವಾಗಿ ಎರಡು ಬಾರಿ ಹಾಜುರಾತಿ ದಾಖಲಿಸುವ ಕುರಿತು ಮಾಹಿತಿ ನೀಡಲಾಯಿತು.

ನರೇಗಾ ಯೋಜನೆಯಡಿ ದಿನದ ಕೂಲಿ ದರವನ್ನು 370ಕ್ಕೆ ಹೆಚ್ಚಳ ಮಾಡಿ, ಅದೇಶ ಹೊರಡಿಸಿ ಸರ್ಕಾರ ಕೂಲಿಕಾರರಿಗೆ ಸಿಹಿ ಸುದ್ದಿ ನೀಡಿದೆ. ಸ್ತ್ರೀ ಚೇತನ ಅಭಿಯಾನದಡಿ ಗಂಡು ಮತ್ತು ಹೆಣ್ಣಿಗೆ 370 ರೂ. ಸಮಾನ ಕೂಲಿ ಇದ್ದು, ಗ್ರಾಮೀಣ ಪ್ರದೇಶದ ಪ್ರತಿ ಅರ್ಹ ಕುಟುಂಬಕ್ಕೂ ಒಂದು ಅರ್ಥಿಕ ವರ್ಷದಲ್ಲಿ 100 ದಿನ ಕೆಲಸ ಕೊಡಲಾಗುತ್ತದೆ. ಒಂದು ಕುಟುಂಬ ವರ್ಷದಲ್ಲಿ ನೂರು ದಿನ ಕೆಲಸ ಮಾಡಿದರೆ, 37 ಸಾವಿರ ರೂ.ಗಳ ಕೂಲಿ ಹಣ ಪಡೆದುಕೊಳ್ಳಬಹುದಾಗಿದೆ.

ಇದೇ ವೇಳೆ ಪ್ರಧಾನ ಮಂತ್ರಿ ಭೀಮಾ ಸುರಕ್ಷಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆಯ ಕುರಿತು ಮಾಹಿತಿ ನೀಡಲಾಯಿತು, ಸಾಮಾಜಿಕ ಭದ್ರತೆ ಕಲ್ಪಿಸಲು ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷ ಚೇತನರು ಹಾಗೂ ಗರ್ಭಿಣಿಯರಿಗೆ ಶೇ.50 ರಷ್ಟು ಕೆಲಸ ಮಾಡಿದರೂ ಪೂರ್ತಿ ಪ್ರಮಾಣದ ಕೂಲಿ ನೀಡಲಾಗುತ್ತದೆ. 3 ವರ್ಷದೊಳಗಿನ ಮಕ್ಕಳನ್ನು ಶಿಶು ಪಾಲನಾ ಕೇಂದ್ರದಲ್ಲಿ ಬಿಟ್ಟು ಬರಬೇಕು. 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಕರೆದುಕೊಂಡು ಬರಬಾರದೆಂಬ ಮಾಹಿತಿ ನೀಡಲಾಯಿತು.

ಎನ್.ಎಂ.ಎಂ.ಎಸ್ ಹಾಜರಾತಿಯನ್ನು ಎರಡು ಬಾರಿ ಕಡ್ಡಾಯವಾಗಿ ತೆಗೆದುಕೊಳ್ಳಲು ಸಿಬ್ಬಂದಿಗಳಿಗೆ ತಿಳಿಸಿ, ಈ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಂದ 317 ಕೂಲಿಕಾರರು ಹಾಜರಿದ್ದರು, ಜನರಿಗೆ ಕೆಲಸ ಮುಗಿದ ಕೂಡಲೇ ನಮೂನೆ 6 ನ್ನು ಕೊಟ್ಟು ಮತ್ತೆ ಕೆಲಸ ಕೊಡುತ್ತೇವೆ ಎಂದು ತಿಳಿಸಿ, ಇಕೆವೈಸಿ ಮಾಹಿತಿ ಪಡೆದು ಶೇ. 93 ರಷ್ಟು ಈಗಾಗಲೇ ಪ್ರಗತಿ ಸಾಧಿಸಿದ್ದು, ಉಳಿದಂತೆ ತಮ್ಮ ಗುರಿಗನುಗುಣವಾಗಿ ಪ್ರಗತಿ ಸಾಧಿಸಿ, ಬಾಕಿ ಉಳಿಯಲು ಕಾರಣಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ವರದಿ ನೀಡಲು ತಿಳಿಸಲಾಯಿತು.

ಈ ಸಂದರ್ಭದಲ್ಲಿ: ಥಾವುಸ್ ತಾಲೂಕು ಐಇಸಿ ಸಂಯೋಜಕರು, ರಾಜೀವ್ ಗಾಂಧಿ ಫೆಲೋ ಧನ್ಯ ಪ್ರಭು, ಗ್ರಾಮ ಪಂಚಾಯತಿ ಡಿ.ಇ.ಓ, ಶರಣಪ್ಪ ಹಾಗೂ ಕೂಲಿ ಕಾರ್ಮಿಕರು ಹಾಜರಿದ್ದರು.

# ರಾಯಚೂರು ತಾಲೂಕಿನಲ್ಲಿ ಇ–ಪೋತಿ ಅಂದೋಲನ: ಯಶಸ್ವಿಗೆ ಸಾರ್ವಜನಿಕರಲ್ಲಿ ತಹಶೀಲ್ದಾರ್ ಸುರೇಶ ವರ್ಮ ಮನವಿ

**ರಾಯಚೂರು,ಡಿ.15–** ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಇ–ಪೋತಿ ಅಂದೋಲನವನ್ನು ರಾಯಚೂರು ತಾಲೂಕಿನ ವ್ಯಾಪ್ತಿಯಲ್ಲಿ ವಿವಿಧ ದಿನಾಂಕಗಳಂದು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಸೂಕ್ತ ದಾಖಲೆಗಳೊಂದಿಗೆ ಅಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಕೋರಿದ್ದಾರೆ.

ಇ–ಪೋತಿ ಅಂದೋಲನಕ್ಕೆ ಸಂಬಂಧಿಸಿದಂತೆ ಮೃತ ಖಾತೆದಾರರ ಹೆಸರಿನಲ್ಲಿ ಇರುವ ಜಮೀನನ್ನು ಅವರ ಕುಟುಂಬ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡುವ ಸಲುವಾಗಿ ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಸಂ/ಕಂ–ಇ/169/ಟಿ.ಆರ್.ಎಮ್ ದಿನಾಂಕ 20–03–2025ರ ಪ್ರಕಾರ ಮೃತ ಖಾತೆದಾರರ ಖಾತೆ ಬದಲಾವಣೆ ಮಾಡಲು ಆದೇಶಿಸಲಾಗಿದ್ದು, ಅದರಂತೆ ರಾಯಚೂರು ತಾಲೂಕಿನ ವ್ಯಾಪ್ತಿಯಲ್ಲಿ ಸುಮಾರು 19,363 ಪೋತಿ ಪ್ರಕರಣಗಳಲ್ಲಿ ಪಟ್ಟೆದಾರರು ಮರಣ ಹೊಂದಿದ್ದು, ಈ ಪಟ್ಟೆದಾರರ ಹೆಸರಿಗೆ ಇರುವ ಜಮೀನುಗಳನ್ನು ಇ– ಪೋತಿ ತಂತ್ರಾಂಶದ ಮೂಲಕ ಗ್ರಾಮ ಆಡಳಿತ ಅಧಿಕಾರಿಗಳು ಇ–ಪೋತಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಲು ಸೂಚಿಸಲಾಗಿದೆ.

ರಾಯಚೂರು ಜಿಲ್ಲೆಯಲ್ಲೆ ಅತಿ ಹೆಚ್ಚು ಪೋತಿ ಪ್ರಕರಣಗಳು ಭಾಕಿ ಇರುವುದರಿಂದ ರಾಯಚೂರು ತಾಲೂಕಿನ ಗ್ರಾಮ ಆಡಳಿತ ಅಧಿಕಾರಿಗಳ ಗ್ರಾ.ಮ ಲೆಕ್ಕ .ವೃತ್ತವಾರು ದಿನಾಂಕಗಳನ್ನು ನಿಗದಿಪಡಿಸಿದ್ದು, ಇ–ಪೋತಿ ಆಂದೋಲನ ಪ್ರಾರಂಭವಾಗುವ ಮುಂಚೆ ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ಗ್ರಾಮಗಳಲ್ಲಿ ಗ್ರಾಮಸ್ಥರಿಗೆ ಡಂಗೂರ ಮುಖಾಂತರ ಹಾಗೂ ಮೈಕ್ ಮುಖಾಂತರ ಈ ದಿನಾಂಕಗಳಂದು ಸೂಕ್ತ ದಾಖಲೆಗಳೊಂದಿಗೆ ಮುಟೇಷನ್ ಮಾಡಿಸಿಕೊಳ್ಳಲು ದಾಖಲೆಗಳನ್ನು ಸಲ್ಲಿಸಲು ಗ್ರಾಮಸ್ಥರಿಗೆ ಮಾಹಿತಿ ನೀಡಬೇಕು. ಈ ದಿನಾಂಕಗಳಂದು ಉಪ ತಹಶಿಲ್ದಾರರ ನೇತೃತ್ವದಲ್ಲಿ ಸಂಬಂಧಿಸಿದ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾಮ ಸಹಾಯಕರು ಈ ದಿನಾಂಕಗಳಂದು ಗ್ರಾಮ.ಲೆಕ್ಕ ವೃತ್ತದಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಮುಟೇಷನ್ ಅರ್ಜಿಗಳನ್ನು ಸ್ವೀಕರಿಸಬೇಕು. ಹಾಗೂ ಈ ಮುಟೇಷನ್ ಅರ್ಜಿಗಳನ್ನು ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಇ–ಪೋತಿ ತಂತ್ರಾಂಶದಲ್ಲಿ ಅಥವಾ ಭೂಮಿ ಕೇಂದ್ರದಲ್ಲಿ ಬಂದು ಅದೇ ದಿನ ನೊಂದಣಿ ಮಾಡಿಸಲು ಸಂಭಂದಿಸಿದ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹಾಗೂ ತಮ್ಮ ವ್ಯಾಪ್ತಿಯಲ್ಲಿ ಭಾಕಿ ಇರುವ ಆಧಾರ ಸೀಡಿಂಗ್‌ನ್ನು ಮಾಡಲು ಸೂಚಿಸಲಾಗಿದೆ.

ಹೋಬಳಿವಾರು ಇ–ಪೋತಿ ಆಂದೋಲನ ದಿನಾಂಕಗಳು: ರಾಯಚೂರು ತಾಲೂಕಿನ ಗಿಲ್ಲೆಸೂಗೂರು ಹೋಬಳಿಯಲ್ಲಿ ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ಭಾರತಿ ಅವರ ನೇತೃತ್ವದಲ್ಲಿ ಗಾಣಧಾಳ, ಗುಂಡ್ರವೇಲಿ, ಚಿಕ್ಕಮಂಚಾಲಿ ಬುಡದಿನ್ನಿ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ವಾಜೇಂದ್ರ ಅವರ ನೇತೃತ್ವದಲ್ಲಿ ಬಿಚ್ಚಾಲಿ, ತುಂಗಭದ್ರ, ಗಟ್ಟುಬಿಚ್ಚಾಲಿ, ತಲಮಾರಿ, ಗಂಗಾವರ, ಎನ್.ಮಲ್ಕಾಪುರು, ಮಿರ್ಜಾಪುರು, ಮೀರಾಪುರ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ಚಂದ್ರಶೇಖರ ಅವರ ನೇತೃತ್ವದಲ್ಲಿ ತುರಕಂಡೋಣ, ಯದ್ಲಾಪುರು, ಮೂಡಲದಿನ್ನಿ. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಹೀರೆ ಲಿಂಗರಾಜ ಅವರ ನೇತೃತ್ವದಲ್ಲಿ ಇಡಪನೂರು. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ರಮೇಶ ಅವರ ನೇತೃತ್ವದಲ್ಲಿ ಮಟಮಾರಿ. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ಆಪ್ರೀನ್ ಅವರ ನೇತೃತ್ವದಲ್ಲಿ ಹನುಮಾಪುರ, ಹೀರಾಪುರ, ಕಟಕನೂರು, ಕೋತಿಗುಡ್ಡದಲ್ಲಿ ನಡೆಯಲಿದೆ.

ಚಂದ್ರಬಂಡ ಹೋಬಳಿಯಲ್ಲಿ ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಶಾರದ ಅವರ ನೇತೃತ್ವದಲ್ಲಿ ಚಂದ್ರಬಂಡ, ಕಡಗಂದೊಡ್ಡಿ, ಅರಸಿಗೇರಾ. ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಸಾಯಿಬಣ್ಣ ಅವರ ನೇತೃತ್ವದಲ್ಲಿ ಕಟ್ಲಟಕೂರು, ಗಣಮೂರು. ಡಿಸೆಂಬರ್ 16ರಂದು ಸಿಂಗನೋಡಿ, ಮಂಡಲಗೇರ, ವಡ್ಲಂದೊಡ್ಡಿ, ಕುರುಬದೊಡ್ಡಿ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಯಂಕಮ್ಮ ಅವರ ನೇತೃತ್ವದಲ್ಲಿ ಯಾಪಲದಿನ್ನಿ, ಗಾಜರಾಳ, ಬುಡದಿಪಾಡ, ಕೂರ್ತಿಪ್ಲಿ, ಅಪ್ಪನದೊಡ್ಡಿ, ರಾಳದೊಡ್ಡಿ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ದೇಶಪಾಂಡೆ ಅವರ ನೇತೃತ್ವದಲ್ಲಿ ಡಿ.ರಾಂಪುರ, ಆಗ್ರಹಾರ, ಕುರ್ವಕುರ್ದಾ, ವಡ್ಡೆಪಲ್ಲಿ, ಕುರ್ವಕಲಾ. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಬಾಬು ಅವರ ನೇತೃತ್ವದಲ್ಲಿ ಕೂಡ್ಲೂರು, ಇಬ್ರಾಹಿಂದೊಡ್ಡಿ, ವಡ್ಲೂರು. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ಸುರೇಶ ಅವರ ನೇತೃತ್ವದಲ್ಲಿ ಆತ್ಕೂರಿನಲ್ಲಿ ಇ–ಪೋತಿ ಅಂದೋಲನ ನಡೆಯಲಿದೆ.

ಕಲಮಲಾ ಹೋಬಳಿಯಲ್ಲಿ ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಶರಣಬಸವ ಅವರ ನೇತೃತ್ವದಲ್ಲಿ ಕಲಮಲಾ. ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ರಾಜಶೇಖರ ಅವರ ನೇತೃತ್ವದಲ್ಲಿ ನೆಲಹಾಳ, ಮಮದಾಪುರ, ಆಶಾಪುರ, ಅರಳಿಬೆಂಚಿ, ಹೊಸೂರು. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಹಸನ್ ಅವರ ನೇತೃತ್ವದಲ್ಲಿ ಹುಣಸಿಹಾಳಹುಡ, ಗೊನ್ವಾಳ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ರಂಗಬಸವರಾಜ ಅವರ ನೇತೃತ್ವದಲಿ ಸುಲ್ತಾನಪುರ, ಮುರಾನಪುರ, ರಘುನಾಥನಹಳ್ಳಿ, ಅರಳಪ್ಪನಹುಡ, ಹಾಳವೆಂಕಟಾ ಪುರ ಹಾಗೂ ಡಿಸೆಂಬರ್ 19ರಂದು ಎ.ಮಲ್ಲಾಪುರ, ಶ್ರೀನಿವಾಸಪುರ, ಹೆಂಬೆರಾಳ, ಜಿ.ತಿಮ್ಮಾಪುರ, ಜಿ.ಹನುಮಾಪುರ. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ಶೇತ್ವ ಅವರ ನೇತೃತ್ವದಲ್ಲಿ ಜೇಗರಕಲ್. ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಮಹಾಂತೇಶ ಅವರ ನೇತೃತ್ವದಲ್ಲಿ ಜಾಗೀರವೆಂಕಟಾಪುರ. ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ನೀಲವೇಣಿ ಅವರ ನೇತೃತ್ವದಲ್ಲಿ ಚಿಕ್ಕಸೂಗೂರ, ಹೊಸಪೇಟ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಶ್ರೀನಿವಾಸ ಅವರ ನೇತೃತ್ವದಲ್ಲಿ ಮನ್ಸಲಾಪುರ, ಕುಕನೂರು. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ಶಾಂತಾ ಅವರ ನೇತೃತ್ವದಲ್ಲಿ ಮರ್ಚೆಟಹಾಳ, ಪೆಸಲದಿನ್ನಿ, ಗಾರಲದಿನ್ನಿ. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಮಹೆಬೂಬ್ ಅವರ ನೇತೃತ್ವದಲ್ಲಿ ಮರ್ಚೇಡನಲ್ಲಿ ಅಂದೋಲನ ನಡೆಯಲಿದೆ.

ದೇವಸುಗೂರು ಹೋಬಳಿಯಲ್ಲಿ ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಸುರೇಶ ಅವರ ನೇತೃತ್ವದಲ್ಲಿ ದೇವಸೂಗೂರು, ಹೆಗ್ಗಸನಹಳ್ಳಿ, ಹನುಮಾನದೊಡ್ಡಿ, ಗಂಜಳ್ಳಿ. ಡಿಸೆಂಬರ್ 16ರಂದು ಕಾಡ್ಲೂರು, ಮೀರಾಪುರ, ಅರಶಿಣಗಿ, ಗುರ್ಜಾಪುರ, ಹೆಚ್.ತಿಮ್ಮಾಪುರ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಸಂಗೀತಾ ಅವರ ನೇತೃತ್ವದಲ್ಲಿ ಕೊರ್ತಕುಂದ, ಕೊರ್ವಿಹಾಳ, ರಾಮಗಡ್ಡಿ, ಮಾಮಿಡಿದೊಡ್ಡಿ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ವೆಂಕಟೇಶ ಅವರ ನೇತೃತ್ವದಲ್ಲಿ ಯದ್ಲಾಪುರ, ಕರೆಕಲ್, ರಂಗಾಪುರ, ಬೇವಿನಬೆಂಚಿ, ನಾಗಲಾಪುರ. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಬಸವರಾಜ ಅವರ ನೇತೃತ್ವದಲ್ಲಿ ಸಗಮಕುಂಟಾ, ಯರಗುಂಟಾ, ಶಾಖವಾದಿ, ಪಲವಲದೊಡ್ಡಿ, ವಾಡವಾನದೂಡ್ಡಿ, ಕೊತ್ತದೊಡ್ಡಿ, ನಾಗನದೊಡ್ಡಿಯಲ್ಲಿ ಇ–ಪೋತಿ ಅಂದೋಲನ ನಡೆಯಲಿದೆ.

ಯರಗೇರಾ ಹೋಬಳಿಯಲ್ಲಿ ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಸಚೀನ್ ಅವರ ನೇತೃತ್ವದಲ್ಲಿ ಯರಗೇರಾ, ದಿನ್ನಿ. ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ಮಧುಕಾಂತ್ ಅವರ ನೇತೃತ್ವದಲ್ಲಿ ಲಿಂಗನಖಾನದೊಡ್ಡಿ, ಜುಲುಂಗೇರಾ, ವೈ.ಮಲ್ಲಾಪುರ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಸುನೀತಾ ಅವರ ನೇತೃತ್ವದಲ್ಲಿ ಗಧಾರ, ಉಪ್ರಾಳ, ಗುಡಿಹಾಳ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ರಾಮಲಿಂಗಪ್ಪ ಅವರ ನೇತೃತ್ವದಲ್ಲಿ ಪೂರ್ತಿಪ್ಲಿ, ಅಲ್ಕೂರು. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಸುರೇಂದ್ರ ಅವರ ನೇತೃತ್ವದಲ್ಲಿ ಉಡುಂಗಲ್ಲು, ಖಾನಾಪುರ, ನಾಗಲಾಪುರ, ಜಾಲಿಬೆಂಚಿ. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ಶಿವುಕುಮಾರ ಅವರ ನೇತೃತ್ವದಲ್ಲಿ ಗುಂಜಳ್ಳಿ. ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಸೋಮನಾಥ ಅವರ ನೇತೃತ್ವದಲ್ಲಿ ಗೊನ್ವಾರ, ಅನ್ವರ, ಕಮಲಾಪುರ, ಮಂಜೆರ್ಲಾ. ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ನಲ್ಲಾರೆಡ್ಡಿ ಅವರ ನೇತೃತ್ವದಲ್ಲಿ ತುಂಟಾಪುರ, ಮುರ್ಕಿದೊಡ್ಡಿ, ಬಸಾಪುರ, ಮಾಸದೊಡ್ಡಿ, ಅಯಾಜಪುರ, ರಾಜಲಬಂಡಾ, ಉಂಡ್ರಾಳದೊಡ್ಡಿ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ಮೌನೇಶ್ ಅವರ ನೇತೃತ್ವದಲ್ಲಿ ಪುಚ್ಚಲದಿನ್ನಿ, ಕನ್ನೆದೊಡ್ಡಿ, ಮಾಳದೊಡ್ಡಿ, ಡಿ.ಬಾಪೂರ, ಕೊತ್ತದೊಡ್ಡಿ, ಜಂಬಲದಿನ್ನಿ, ಮಿಡಗಲದಿನ್ನಿಯಲ್ಲಿ ಇ–ಪೋತಿ ಅಂದೋಲನ ನಡೆಯಲಿದೆ.

ರಾಯಚೂರು ಹೋಬಳಿಯಲ್ಲಿ ಡಿಸೆಂಬರ್ 15ರಂದು ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ಅವರ ನೇತೃತ್ವದಲ್ಲಿ ರಾಯಚೂರು. ಡಿಸೆಂಬರ್ 16ರಂದು ಗ್ರಾಮ ಆಡಳಿತ ಅಧಿಕಾರಿ ಹನುಮೇಶ್ ಅವರ ನೇತೃತ್ವದಲ್ಲಿ ಅಸ್ಕಿಹಾಳ, ರಾಂಪುರ. ಡಿಸೆಂಬರ್ 17ರಂದು ಗ್ರಾಮ ಆಡಳಿತ ಅಧಿಕಾರಿ ನಾಗರತ್ನ ಅವರ ನೇತೃತ್ವದಲ್ಲಿ ಯಕ್ಲಾಸಪುರ, ಫತೆಪುರ. ಡಿಸೆಂಬರ್ 18ರಂದು ಗ್ರಾಮ ಆಡಳಿತ ಅಧಿಕಾರಿ ಸುಭಾಷ್ ಅವರ ನೇತೃತ್ವದಲ್ಲಿ ಸಿದ್ದರಾಂಪುರ, ಮಲಿಯಾಬಾದ, ಮಿಟ್ಟಿಮಲ್ಕಾಪುರ, ದೇವನಪಲ್ಲಿ. ಡಿಸೆಂಬರ್ 19ರಂದು ಗ್ರಾಮ ಆಡಳಿತ ಅಧಿಕಾರಿ ಗಂಗಪ್ಪ ಅವರ ನೇತೃತ್ವದಲ್ಲಿ ಬಾಯಿದೊಡ್ಡಿ, ವಡ್ವಟ್ಟಿ, ಗೌಸನಗರ, ಬೊಳಮಾನದೊಡ್ಡಿ, ಬಾಪುರ, ಬಿಜನಗೇರಾ, ತಮ್ಮಲಗಟ್ಟ, ಹಾರ್ಕನದೊಡ್ಡಿ, ಆಗಾಪುರ. ಡಿಸೆಂಬರ್ 20ರಂದು ಗ್ರಾಮ ಆಡಳಿತ ಅಧಿಕಾರಿ ಬಾಬು ಅವರ ನೇತೃತ್ವದಲ್ಲಿ ಯರಮರಸ, ಸಂಕನೂರ, ಪೋತ್ಗಲ್, ಏಗನೂರು ಹಾಗೂ ಪಲ್ಕಂದೊಡ್ಡಿಯಲ್ಲಿ ರಾಜ್ಯ ಸರ್ಕಾರದ ಮಹತ್ವಕಾಂಕ್ಷೀ ಯೋಜನೆಯಾದ ಇ–ಪೋತಿ ಅಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇರದ ಸದುಪಯೋಗವನ್ನು ಪಡೆಯಬೇಕೆಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇವದುರ್ಗ: ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಸರ್ಕಿಲ್, ಉಪಾಧ್ಯಕ್ಷರಾಗಿ ಆನಂದ ಗುಡಿ ಆಯ್ಕೆ

ಯುವಮಾರ್ಗ ಸುದ್ದಿ

**ದೇವದುರ್ಗ,ಡಿ.15–** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದೇವದುರ್ಗ ತಾಲೂಕು ಘಟಕದ ಅಧ್ಯಕ್ಷರಾಗಿ ನರಸಿಂಗ್ ರಾವ್ ಸರ್ಕಿಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ ಅಳ್ಳುಂಡಿ ಆಯ್ಕೆಯಾದರು. ದೇವದುರ್ಗ ಪಟ್ಟಣದ ಎಪಿಎಂಸಿ ಸಭಾಂಗಣದಲ್ಲಿ ರವಿವಾರ ಬೆಳಗ್ಗೆ ತಾಲೂಕು ಘಟಕಕ್ಕೆ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ನರಸಿಂಗರಾವ್ ಸರ್ಕಿಲ್ , ಬೆಳ್ಳಿಯಪ್ಪ ಬಲ್ಲಿದವ ನಾಮಪತ್ರ ಸಲ್ಲಿಸಿದರೆ, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರವಿಕುಮಾರ ಪಾಟೀಲ್ ಅಳ್ಳುಂಡಿ, ನಾಗರಾಜ್ ತೇಲ್ಕರ್ ನಾಮಪತ್ರ ಸಲ್ಲಿಸಿದ್ದರು. ನರಸಿಂಗರಾವ್ ಸರ್ಕಿಲ್ 16 ಮತಗಳು ಪಡೆದು ಆಯ್ಕೆಯಾದರೆ, ಬೆಳ್ಳಿಯಪ್ಪ 11 ಮತಗಳನ್ನು ಪಡೆದು ಪರಾಭವಗೊಂಡರು. ಇನ್ನೂ ರವಿಕುಮಾರ ಅಳ್ಳುಂಡಿ 18 ಸ್ಥಾನ ಪಡೆದು ಆಯ್ಕೆಯಾದರೆ, ನಾಗರಾಜ್ ತೇಲ್ಕರ್ 7 ಮತಗಳನ್ನು ಪಡೆದು ಪರಾಭವಗೊಂಡರು.

ಒಂದು ಮತ ತಿರಸ್ಕೃತಗೊಂಡರೆ, ಒಂದು ಮತ ಚಲಾವಣೆ ಆಗಿರಲಿಲ್ಲ. ಇನ್ನೂ ಎರಡು ಉಪಾಧ್ಯಕ್ಷ ಸ್ಥಾನಗಳಿಗೆ ಬೂದಿಬಸವ, ಆನಂದ ಗುಡಿ ಮಾತ್ರ ನಾಮಪತ್ರ ಸಲ್ಲಿಸಿದರೆ, ಕಾರ್ಯದರ್ಶಿ ಸ್ಥಾನಕ್ಕೆ ಕೆ.ಬಂದೇನವಾಜ್ , ಚಂದ್ರಶೇಖರ ನಾಡಗೌಡ ಹಾಗೂ ಖಜಾಂಚಿ ಸ್ಥಾನಕ್ಕೆ ರಂಗನಾಥ ಕೊಂಬಿನ್ ಮಾತ್ರ ಉಮೇದುವಾರಿಕೆ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷ ಆರ್.ಗುರುನಾಥ ಫಲಿತಾಂಶ ಪ್ರಕಟಿಸಿ ವಿಜೇತರಿಗೆ ಪ್ರಮಾಣಪತ್ರ ವಿತರಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಜಿಲ್ಲಾ ಉಪಾಧ್ಯಕ್ಷರಾದ ಸೂಗೂರೇಶ ಎಸ್.ಗುಡಿ, ಮಹಾನಂದ ನಾಯಕ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಲಕ್ಷ್ಮಿ ಪ್ರಸನ್ನ ಜೈನ್ ನೇತೃತ್ವದಲ್ಲಿ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು.

# ಡಿಕೆಶಿ ವರಿಷ್ಠರ ಭೇಟಿ ಕುತೂಹಲ



**ಬೆಳಗಾವಿ, ಡಿ. 15–** ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಜಟಾಪಟಿ ತಾರಕಕ್ಕೇರಿ ವಿಧಾನ ಮಂಡಲ ಅಧಿವೇಶನ ನಡೆಯುತ್ತಿರುವ ಹೊತ್ತಿನಲ್ಲೇ ಕುರ್ಚಿ ಕಿತ್ತಾಟ ಬಿರುಸಾಗಿ ಬಣ ರಾಜಕೀಯ ಮೇಳೈಸಿರುವಾಗಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ವರಿಷ್ಠ ನಾಯಕರನ್ನು ಭೇಟಿ ಮಾಡಿರುವುದು ಮಹತ್ವ ಪಡೆದುಕೊಂಡಿದೆ.

ದೆಹಲಿಯಲ್ಲಿ ನಿನ್ನೆ ವೋಟ್ ಚೋರಿ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಶಾಸಕರು ಭಾಗಿಯಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನಿನ್ನೆಯೇ ದೆಹಲಿಯಿಂದ ವಾಪಸ್ಸಾಗಿದ್ದರು. ಆದರೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿನ್ನೆ ದೆಹಲಿಯಲ್ಲೇ ಮೊಕ್ಕಾಂ ಹೂಡಿದ್ದರು.

ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ನೀಡಿರುವ ನೋಟಿಸ್ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರ ಮುಂದೆ ಹಾಜರಾಗಲು ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲೇ ಉಳಿದಿದ್ದರು. ಆ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ, ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ವರಿಷ್ಠ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಿರುವುದು ಮಹತ್ವ ಪಡೆದುಕೊಂಡಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಜಟಾಪಟಿ ಪರಾಕಾಷ್ಠೆ ತಲುಪಿ ನಾಯಕತ್ವ ಬದಲಾವಣೆ ಸಂಬಂಧ ಶಾಸಕರುಗಳು ಪರ–ವಿರೋಧ ಹೇಳಿಕೆಗಳನ್ನು ನೀಡುತ್ತಿರುವಾಗಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿರುವುದು ಕುತೂಹಲ ಮೂಡಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವರಿಷ್ಠರ ಜತೆಗಿನ ತಮ್ಮ ಭೇಟಿಯ ಗುಟ್ಟನ್ನು ಬಿಟ್ಟು ಕೊಟ್ಟಿಲ್ಲ. ಆದರೆ ಅವರು ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಆದಷ್ಟು ಬೇಗ ಒಂದು ತೀರ್ಮಾನ ಕೈಗೊಂಡು ರಾಜ್ಯ ಕಾಂಗ್ರೆಸ್‌ನಲ್ಲಿ ನಡೆದಿರುವ ಬಣ ರಾಜಕೀಯ ಎಲ್ಲದಕ್ಕೂ ತೆರೆ ಎಳೆಯುವಂತೆ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ.

**ಮಾಮೂಲಿನಂತೆ ಭೇಟಿ: ಚರ್ಚೆ**

ದೆಹಲಿಯಲ್ಲಿ ವರಿಷ್ಠರ ಭೇಟಿ ಮಾಡಿ ಚರ್ಚಿಸಿರುವ ಬಗ್ಗೆ ಯಾವುದನ್ನೂ ಬಹಿರಂಗಗೊಳಿಸದ ಡಿ.ಕೆ. ಶಿವಕುಮಾರ್ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವರಿಷ್ಠ ನಾಯಕರುಗಳಾದ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಖರ್ಗೆ ಸಾಹೇಬ್ರು, ವೇಣುಗೋಪಾಲ್ ಎಲ್ಲರನ್ನು ಭೇಟಿ ಮಾಡಿದ್ದೇನೆ. ನಾನು ದೆಹಲಿಗೆ ಬಂದಾಗ ವರಿಷ್ಠರನ್ನು ಭೇಟಿ ಮಾಡಬೇಕಲ್ಲವೇ, ಅದರಲ್ಲೇನಿದೆ ಎಂದರು.

ಇಂದು ವರಿಷ್ಠ ನಾಯಕರನ್ನು ಪ್ರತ್ಯೇಕ ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ, ಇಲ್ಲ ಹಿರಿಯ ನಾಯಕರು ಹಾಗೂ ಶಾಸಕರಾದ ಶಾಮನೂರು ಶಿವಶಂಕರಪ್ಪನವರ ನಿಧನ ಹಿನ್ನೆಲೆಯಲ್ಲಿ ದಾವಣಗೆರೆಗೆ ನಾನು ಮತ್ತು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಒಟ್ಟಿಗೆ ವಿಶೇಷ ವಿಮಾನದಲ್ಲಿ ತೆರಳುತ್ತಿದ್ದೇವೆ. ಬೆಳಿಗ್ಗೆಯೇ ಹೊರಡಬೇಕಿತ್ತು. ಹವಾಮಾನ ವೈಪರಿತ್ಯದ ಕಾರಣ ಹೊರಡವುದು ತಡವಾಗಿದೆ ಎಂದರು.

**ವರಿಷ್ಠರ ಭೇಟಿ ಇದ್ದೇ ಇರುತ್ತದೆ: ಡಿಕೆಶಿ**

ವರಿಷ್ಠರ ಜತೆ ಮಾತನಾಡಿದ ವಿಚಾರಗಳ ಬಗ್ಗೆ ಡಿ.ಕೆ. ಶಿವಕುಮಾರ್ ಯಾವುದೇ ಗುಟ್ಟು ಬಿಟ್ಟು ಕೊಡಲಿಲ್ಲ.

ನಾನು ದೆಹಲಿಗೆ ಬಂದಾಗಲೆಲ್ಲಾ ವರಿಷ್ಠರನ್ನು ಭೇಟಿ ಮಾಡಿ ಮಾತನಾಡುತ್ತೇವೆ, ಅದರಲ್ಲಿ ವಿಶೇಷತೆ ಏನಿದೆ ಎಂದು ಅವರು ವರಿಷ್ಠರ ಭೇಟಿ ಬಗ್ಗೆ ಮಾತನಾಡಿದರು.

ವರಿಷ್ಠರನ್ನು ಪ್ರತ್ಯೇಕವಾಗಿ ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ, ನನ್ನದು, ಅವರದ್ದು ಭೇಟಿ ಇದ್ದೇ ಇರುತ್ತದೆ ರೀ.. ಡೋಂಟ್ ವರ್ರೀ.. ಎಂದು ಡಿ.ಕೆ. ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ಸಮಯ ಕೇಳುತ್ತೇನೆ

ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರ ಮುಂದೆ ಇಂದು ಹಾಜರಾಗಬೇಕಿತ್ತು. ಅದಕ್ಕಾಗಿ ದೆಹಲಿಯಲ್ಲಿ ಉಳಿದಿದ್ದೆ. ಈಗ ತುರ್ತಾಗಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪನವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ದಾವಣಗೆರೆಗೆ ತೆರಳುತ್ತಿದ್ದೇನೆ. ಹಾಗಾಗಿ ಮುಂದಿನ ವಾರ ಬರುತ್ತೇನೆ ಎಂದು ದೆಹಲಿ ಪೊಲೀಸರಿಗೆ ಹಾಜರಾಗಲು ಸಮಯ ಕೇಳಿದ್ದೇನೆ ಎಂದರು.

ದೆಹಲಿ ಪೊಲೀಸರು ನನಗೆ ನೀಡಿರುವ ನೋಟಿಸ್‌ನಲ್ಲಿ ಎಫ್‌ಐಆರ್ ಪ್ರತಿಯನ್ನೇ ಕಳುಹಿಸಿಲ್ಲ ಎಂದು ಅವರು ಹೇಳಿದರು.

**ಅಧಿಕಾರ ಹಂಚಿಕೆ ಸಮಸ್ಯೆಗೆ ಸದ್ಯದಲ್ಲೇ ವರಿಷ್ಠರಿಂದ ಮದ್ದು**

ರಾಜ್ಯದಲ್ಲಿ ತಾರಕಕ್ಕೇರಿರುವ ಅಧಿಕಾರ ಹಂಚಿಕೆಯ ಕಗ್ಗಂಟ್ಟಿಗೆ ಕಾಂಗ್ರೆಸ್ ವರಿಷ್ಠರು ಸದ್ಯದಲ್ಲೇ ಮದ್ದು ಅರೆಯಲಿದ್ದಾರೆ.

ದೆಹಲಿಯಲ್ಲಿ ನಿನ್ನೆ ನಡೆದ ಮತ ಚೋರಿ ವಿರುದ್ಧದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ರಾಜ್ಯದಿಂದ ದೆಹಲಿಗೆ ತೆರಳಿದ್ದ ಹಲವು ಸಚಿವರು, ಶಾಸಕರು ಹಾಗೂ ಪ್ರಮುಖ ಮುಖಂಡರುಗಳಲ್ಲಿ ಕೆಲವರು ವರಿಷ್ಠರನ್ನು ಭೇಟಿ ಮಾಡಿ ಅಧಿಕಾರ ಹಂಚಿಕೆ ಜಟಾಪಟಿಯಿಂದ ಪಕ್ಷ ಹಾಗೂ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ. ಆದಷ್ಟು ಬೇಗ ಇದಕ್ಕೊಂದು ಪರಿಹಾರ ರೂಪಿಸಿ ಎಂದು ಮನವಿ ಮಾಡಿದ್ದು, ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕಾಂಗ್ರೆಸ್ ಹೈಕಮಾಂಡ್ ವಿಧಾನಸಭಾ ಅಧಿವೇಶನ ಮುಗಿದ ನಂತರ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳನ್ನು ದೆಹಲಿಗೆ ಕರೆಸಿಕೊಂಡು ಒಂದು ಪರಿಹಾರ ರೂಪಿಸುವ ಭರವಸೆಯನ್ನು ನೀಡಿದೆ ಎಂದು ಹೇಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರು ಉಪಹಾರ ಸಭೆಯ ಮೂಲಕ ತಾರಕಕ್ಕೇರಿದ್ದ ಅಧಿಕಾರ ಜಟಾಪಟಿಗೆ ವಿರಾಮ ಹೇಳಿದ್ದರು. ಆದರೆ ಬೆಳಗಾವಿ ಅಧಿವೇಶನ ನಡೆದಿರುವ ಹೊತ್ತಿನಲ್ಲೇ ಮತ್ತೆ ಕೆಲ ಶಾಸಕರ ಹೇಳಿಕೆಗಳಿಂದ ಅಧಿಕಾರ ಹಂಚಿಕೆಯ ಜಟಾಪಟಿ ಮುನ್ನೆಲೆಗೆ ಬಂದಿದ್ದು, ಆದಷ್ಟು ಬೇಗ ಇದನ್ನು ಪರಿಹರಿಸುವಂತೆ ಕೆಲ ಸಚಿವರು ಹಾಗೂ ಮುಖಂಡರು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಮನವಿ ಮಾಡಿದ್ದು, ಖರ್ಗೆಯವರು ಸ್ವಲ್ಪ ಸಮಾಧಾನದಿಂದಿರಿ, ಎಲ್ಲವನ್ನು ಬಗೆಹರಿಸುತ್ತೇವೆ ಎಂಬ ಮಾತನಗಳನ್ನಾಡಿದ್ದು, ಸಂಸತ್ತಿನ ಅಧಿವೇಶನ ಮುಗಿದ ನಂತರ ರಾಜ್ಯದಲ್ಲಿ ಅಧಿಕಾರ ಹಂಚಿಕೆಯ ಜಟಾಪಟಿಗೂ ಹೈಕಮಾಂಡ್ ಪರಿಹಾರ ಕಂಡುಕೊಳ್ಳುವುದು ನಿಶ್ಚಿತ ಎಂದು ಹೇಳಲಾಗುತ್ತಿದೆ.

**ಸೋನಿಯಾ ರಾಹುಲ್ ಭೇಟಿ**

ಕೆ.ಸಿ ವೇಣುಗೋಪಾಲ್ ಹಾಗೂ ಸುರ್ಜೆವಾಲ ಅವರನ್ನು ಭೇಟಿಯಾಗಿರುವ ಬಗ್ಗೆ ಕೇಳಿದಾಗ, "ನಾನು ದೆಹಲಿಗೆ ಬಂದಾಗ ಎಲ್ಲರನ್ನೂ ಭೇಟಿ ಮಾಡಬೇಕು. ಸುರ್ಜೆವಾಲ ಅವರನ್ನು, ಮಲ್ಲಿಕಾರ್ಜುನ ಖರ್ಗೆ ಸಾಹೇಬರನ್ನು, ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಬೇಕು. ನಿನ್ನೆ ಇಂದಿರಾ ಭವನದಲ್ಲಿ ನಡೆದ ಭೋಜನ ಕೂಟದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನೂ ಭೇಟಿ ಮಾಡಿದ್ದೆ" ಎಂದು ತಿಳಿಸಿದರು.

ಇಂದು ವೈಯಕ್ತಿಕವಾಗಿ ಭೇಟಿ ಮಾಡುತ್ತೀರಾ ಎಂದು ಕೇಳಿದಾಗ, "ಇಂದು ಖರ್ಗೆ ಸಾಹೇಬರ ಜೊತೆಯಲ್ಲೇ ದಾವಣಗೆರೆಗೆ ಹೋಗುತ್ತಿದ್ದೇವೆ. ತುರ್ತು ಕಾರಣಕ್ಕೆ ವಿಶೇಷ ವಿಮಾನ ವ್ಯವಸ್ಥೆ ಮಾಡಲಾಗಿತ್ತು. ಮಂಜು ಕವಿದ ವಾತಾವರಣ ಇರುವ ಕಾರಣಕ್ಕೆ ತಡವಾಯಿತು" ಎಂದರು.

ಅಧಿವೇಶನ ಮುಗಿದ ಬಳಿಕ ಮತ್ತೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಕುರಿತು ಪ್ರತಿಕ್ರಿಯಿಸಿದ ಅವರು, "ಪಕ್ಷದಲ್ಲಿ ನಮ್ಮ ಅವರ ಮಧ್ಯೆ ಮಾತುಕತೆ ಇದ್ದೇ ಇರುತ್ತದೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ" ಎಂದರು.

# ವಿಧಾನಸಭೆ ಮತ್ತು ವಿಧಾನ ವಿಧಾನಪರಿಷತ್‌ನಲ್ಲಿ ಶಾಮನೂರು ಶಿವಶಂಕರಪ್ಪನವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಕೆ

**ಬೆಳಗಾವಿ,ಡಿ.15–** ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ, ಮಾಜಿ ಸಚಿವರು ಹಾಗೂ ವಿಧಾನಸಭೆ ಸದಸ್ಯರಾದ ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ವಿಧಾನಸಭೆಯಲ್ಲಿಂದು ಭಾವಪೂರ್ಣ ಸಂತಾಪ ಸೂಚಿಸ ಲಾಯಿತು.ಇಂದು ಬೆಳಿಗ್ಗೆ ಸದನ ಸಮಾವೇಶಗೊಂಡಾಗ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಸಂತಾಪಸೂಚನಾ ನಿರ್ಣಯವನ್ನು ಮಂಡಿಸುತ್ತಾ, ಶ್ಯಾಮನೂರು ಶಿವಶಂಕರಪ್ಪ ಅವರು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಸಿದರು.



ಶಿವಶಂಕರಪ್ಪನವರು 1931 ರ ಜೂ.16 ರಂದು ದಾವಣಗೆರೆಯಲ್ಲಿ ಜನಿಸಿದ್ದರು. ಮೂಲತಃ ಉದ್ಯಮಿಯಾಗಿದ್ದ ಅವರು, 1969 ರಲ್ಲಿ ದಾವಣಗೆರೆ ನಗರಸಭೆ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದ್ದರು. ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಯುತರು ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಬಾಪೂಜಿ ವಿದ್ಯಾಸಂಸ್ಥೆಗಳು, ದಾವಣಗೆರೆ ಅಂಗವಿಕಲರ ಆಶಾಕಿರಣ ಟ್ರಸ್ಟ್, ಕ್ರಿಕೆಟ್ ಕ್ಲಬ್, ಸ್ಪೋರ್ಟ್ಸ್ ಸಂಘ ಸಂಸ್ಥೆ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಸಮಾಜದ ಎಲ್ಲಾ ರಂಗಗಳಲ್ಲೂ ತಮದೇ ಆದ ಛಾಪನ್ನು ಮೂಡಿಸಿದ್ದರು. ಅಪರಿಮಿತ ಜೀವನೋತ್ಸಾಹ, ಜನರ ಬಗ್ಗೆ ಅಪಾರ ಕಾಳಜಿ ಮತ್ತು ಪ್ರೀತಿ ಹೊಂದಿದ್ದರು ಎಂದು ಗುಣಗಾನ ಮಾಡಿದರು.

ಶಿವಂಕರಪ್ಪನವರು ಒಬ್ಬ ವ್ಯಕ್ತಿಯಾಗಿರದೆ ರಾಜಕಾರಣ, ಶಿಕ್ಷಣ, ಸಾಹಿತ್ಯ, ಆರೋಗ್ಯ, ಅಭಿವೃದ್ಧಿ, ಶಕ್ತಿ, ದಾನಧರ್ಮ, ಅಭಿವೃದ್ಧಿ ಸೇರಿದಂತೆ ಎಲ್ಲಾ ಗುಣಗಳ ಸಂಗಮವಾಗಿದ್ದರು. ದಾವಣಗೆರೆಯಲ್ಲಿ ಜವಳಿಗಿರಣಿಗಳ ಅವನತಿಯಾದಾಗ ಬ್ರಾಂಡ್ ಇಮೇಜ್ ತಂದುಕೊಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದ್ದರು.

ಅಪಾರ ದೈವಭಕ್ತರಾಗಿದ್ದ ಅವರು ದೇವಸ್ಥಾನಗಳ, ಗೋಪುರಗಳ ರಥಗಳ ನಿರ್ಮಾಣಕ್ಕೆ ಕೊಡುಗೆಯಾಗಿದ್ದರು.ಎಲ್ಲರೊಂದಿಗೂ ಸ್ನೇಹದಿಂದ ಇರುತ್ತಿದ್ದ ಅವರು ಅಜಾತಶತ್ರು ಎನಿಸಿದ್ದರು. ಜಿಲ್ಲೆಯಲ್ಲಿ ಬಡವರಿಗೆ ಉಚಿತವಾಗಿ ಕೊರೋನ ಲಸಿಕೆ, ಆಹಾರ ಔಷಧಿ ಹಂಚುವ ಮೂಲಕ ಸಾಮಾಜಿಕ ಕಳಕಳಿಯನ್ನು ತೋರಿಸಿದ್ದರು ಎಂದರು.

1994 ರಲ್ಲಿ ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿ ನಾಯಕರಾಗಿದ್ದ ಅವರು ದಾವಣಗೆರೆ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಸೇರಿದಂತೆ ಒಟ್ಟು ಆರು ಬಾರಿ ಶಾಸಕರಾಗಿದ್ದರು. ಒಮೆ ಸಂಸದರಾಗಿದ್ದರು. 2013 ರಿಂದ 2016ರ ಅವಧಿಯಲ್ಲಿ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರಾಗಿ ಸೇವೆ ಸಲ್ಲಿಸಿದ್ದರು ಎಂದು ಹೇಳಿದರು.

ಕುವೆಂಪು ವಿವಿಯಿಂದ ಗೌರವ ಡಾಕ್ಟರೇಟ್ ಪಡೆದಿದ್ದ ಅವರು, ವಿದ್ಯಶ್ರೀ ಮತ್ತು ನಿತ್ಯ ಸೇವಾ ಯಜ್ಞಧಾರಿ, ಭಾರತ್ ಗೌರವ, ಶಿರೋಮಣಿ ವಿಕಾಸ, ಇಂದಿರಾ ಪ್ರಿಯದರ್ಶಿನಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗೆ ಭಾಜನರಾಗಿದ್ದರು.

ಹಿರಿಯ ರಾಜಕಾರಣಿ, ರಾಜಕೀಯ ಮುತ್ಸದ್ದಿ, ದಾವಣಗೆರೆಯ ಜನಮುಖಿ, ಸಮಾಜಮುಖಿಯಾಗಿದ್ದ ಶಿವಶಂಕರಪ್ಪನವರು ನಿನ್ನೆ ನಿಧನರಾಗಿದ್ದಾರೆ. ಅವರ ಸಮಾಜಮುಖಿ ಕಾರ್ಯಗಳು ಹಿಮಾಲಯದಷ್ಟು ಎತ್ತರದಲ್ಲಿವೆ. ಜಟಿಲವಾದ ವಿಚಾರಗಳಿಗೆ ನಗುಮುಖದಿಂದ ಪರಿಹಾರ ಒದಗಿಸುತ್ತಿದ್ದರು. ಅವರ ಜೀವನ ಯುವಜನರಿಗೆ ಸಂದೇಶವಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯನವರು, ತಮ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಮಂತ್ರಿ ಮಾಡುವಂತೆ ಹೇಳಿದ್ದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಅವರು ಆರು ಬಾರಿ ಶಾಸಕರಾಗಿದ್ದರು. ಒಮೆ ಸಂಸದರಾಗಿದ್ದರು. ದಾವಣಗೆರೆಯನ್ನು ವಿದ್ಯಾಕಾಶಿ ಮಾಡಿದ್ದರು. ಸಾಮಾಜಿಕ ಕ್ಷೇತ್ರದಲ್ಲಿ ತಮದೇ ಆದ ಛಾಪು ಮೂಡಿಸಿದ್ದಾರೆ ಎಂದು ಸರಿಸಿದರು.

ಕೆಪಿಸಿಸಿ ಖಜಾಂಚಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಅವರಿಗೆ ಶತ್ರುಗಳಿರಲಿಲ್ಲ. ಹೀಗಾಗಿ ಅಜಾತಶತ್ರುವಾಗಿದ್ದರು. ನನ್ನ 75 ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮ ದಾವಣಗೆರೆಯ ಅವರ ಜಾಗದಲ್ಲೆ ನಡೆಯಿತು ಎಂದು ಹೇಳಿದರು.ಕೋವಿಡ್ ಸಂದರ್ಭದಲ್ಲಿ ಆರು ಕೋಟಿ ರೂ. ವೆಚ್ಚ ಮಾಡಿ ಆಮ್ಲಜನಕವನ್ನು ಉಚಿತವಾಗಿ ಹಂಚಿದವರು ಶ್ಯಾಮನೂರು ಶಿವಶಂಕರಪ್ಪನವರು ಅಪರೂಪ ರಾಜಕಾರಣಿ. 15 ದಿನಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದಾಗ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದು ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದರು.

ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ವಿಧಾನಸಭೆ ಸದಸ್ಯರಾಗಿದ್ದ ಮೇಟಿ ಅವರಿಗೆ ಕಳೆದ ವಾರ ಸಂತಾಪ ಸಲ್ಲಿಸಿದ್ದೇವೆ. ಇಂದು ಶಾಮನೂರು ಶಿವಶಂಕರಪ್ಪನವರಿಗೆ ಸಂತಾಪ ಸಲ್ಲಿಸುತ್ತಿದ್ದೇವೆ. ಅವರು ಬದುಕಿರುವವರೆಗೂ ಅಧಿಕಾರದಲ್ಲಿರಬೇಕು, ಇನ್ನೊಂದು ಚುನಾವಣೆಯಲ್ಲೂ ಸ್ಪರ್ಧಿಸುವುದಾಗಿ ಹೇಳುತ್ತಿದ್ದರು. ಬಹಳ ಗಟ್ಟಿ ಮನುಷ್ಯ. ದಾವಣಗೆರೆಯಲ್ಲಿನ ಹೆದ್ದಾರಿಗಳಲ್ಲಿ ಶಿಕ್ಷಣ ಸಂಸ್ಥೆಗಳ ಎದ್ದು ಕಾಣುತ್ತವೆ, ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಿದ್ದಾರೆ. ವಿದ್ಯೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಎಂದು ಗುಣಗಾನ ಮಾಡಿದರು.

ಸಂತಾಪಸೂಚನಾ ನಿರ್ಣಯವನ್ನು ಬೆಂಬಲಿಸಿ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕರಾದ ಸುರೇಶ್‌ಕುಮಾರ್, ಬಾಲಕೃಷ್ಣ, ಬಣಕಾರ್, ಸಿ.ಸಿ.ಪಾಟೀಲ್, ಶಿವಲಿಂಗೇಗೌಡ, ಅಪ್ಪಾಜಿ ನಾಡಗೌಡ, ಡಾ.ರಂಗನಾಥ್, ಸಿದ್ದು ಸವದಿ, ಜಿ.ಟಿ.ಪಾಟೀಲ್, ಅರಗಜ್ಞಾನೇಂದ್ರ ಮೊದಲಾದವರು ಪಕ್ಷಬೇಧ ಮರೆತು ಶಾಮನೂರು ಶಿವಶಂಕರಪ್ಪ ಅವರ ಗುಣಗಾನ ಮಾಡಿ ಮೃತರ ಆತಕ್ಕೆ ಶಾಂತಿ ಕೋರಿದರು.

ನಂತರ ಮೃತರ ಗೌರವಾರ್ಥ ಸದನದ ಸದಸ್ಯರೆಲ್ಲಾ ಎದ್ದು ನಿಂತು ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು. ಬಳಿಕ ಸದನದ ಕಾರ್ಯ ಕಲಾಪಗಳನ್ನು ನಾಳೆಗೆ ಮುಂದೂಡಿದರು.

ಧರ್ಮಾತೀತ ವ್ಯಕ್ತಿ ಎಂದು ಕೊಂಡಾಡಿದರು.

ಸದಸ್ಯ ಸಿ.ಟಿ.ರವಿ ಮಾತನಾಡಿ, ಶ್ಯಾಮನೂರು ಶಿವಶಂಕರಪ್ಪ ಕಷ್ಟದ ಸಂದರ್ಭಗಳಲ್ಲಿ ಜನರಿಗೆ ಸಹಾಯಹಸ್ತ ಚಾಚುತ್ತಿದ್ದರು. ಕೋವಿಡ್ ಸಂದರ್ಭದಲ್ಲಿ ಆರು ಕೋಟಿಗೂ ಹೆಚ್ಚು ವೆಚ್ಚ ಮಾಡಿ ಆಕ್ಸಿಜನ್ ಸರಬರಾಜು ಮಾಡಿದ್ದರು. ಅವರ ಕ್ಷೆ?ತ್ರದಲ್ಲಿ ಸರ್ಕಾರದಿಂದ ಹಣ ಬಿಡುಗಡೆಯಾಗದೇ ಇದ್ದ ಸಂದರ್ಭದಲ್ಲಿ ಇವರೇ ಸ್ವಂತ ದುಡ್ಡಿನಲ್ಲಿ ಕಾಮಗಾರಿ ನಡೆಸಿದ್ದರು ಎಂದರು.

ಸಂತಾಪ ನಿರ್ಣಯ ಮುಗಿದ ಮೇಲೆ ಮೃತರ ಗೌರವಾರ್ಥವಾಗಿ ಸದನದ ಸದಸ್ಯರು ಒಂದು ನಿಮಿಷ ಎದ್ದು ನಿಂತು ಮೌನ ಆಚರಿಸಿದರು. ಮೃತರ ಗೌರವಾರ್ಥವಾಗಿ ಸಭಾಪತಿಯವರು ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು.

# ಬೆಂಗಳೂರಲ್ಲಿ ಮಾರಾಟವಾಗುತ್ತಿರುವ ಮೊಟ್ಟೆಯಲ್ಲಿ ಕ್ಯಾನ್ಸರ್‌ಕಾರಕ ಅಂಶ ಪತ್ತೆ..!

**ಬೆಂಗಳೂರು, ಡಿ.15–**ನಗರದ ಅಂಗಡಿ ಮುಂಗಟ್ಟುಗಳಲ್ಲಿ ಮಾರಾಟ ಮಾಡುತ್ತಿರುವ ಮೊಟ್ಟೆಗಳನ್ನು ಸಂಗ್ರಹಿಸಿ ಲ್ಯಾಬ್ ಟೆಸ್ಟ್‌ಗೆ ಕಳುಹಿಸಿಕೊಡಲಾಗುತ್ತಿದೆ.ಮೊಟ್ಟೆಗಳಲ್ಲಿ ಕ್ಯಾನ್ಸರ್‌ಕಾರಕ ಅಂಶ ಪತ್ತೆಯಾಗಿದೆ ಎಂಬ ಚರ್ಚೆ ಬೆನ್ನಲ್ಲೆ ಆರೋಗ್ಯ ಸಚಿವರ ನಿರ್ದೇಶನದಂತೆ ನಗರದಾದ್ಯಂತ ಇರುವ ಸೂಪರ್ ಮಾರುಕಟ್ಟೆಗಳು, ಮಾರ್ಟ್‌ಗಳಲ್ಲಿ ಮಾರಾಟ ಮಾಡುತ್ತಿರುವ ಮೊಟ್ಟೆಗಳ ಸ್ಯಾಂಪಲ್ ಸಂಗ್ರಹಿಸಲಾಗುತ್ತಿದೆ.

ನಗರದಲ್ಲಿ 50ಕ್ಕೂ ಹೆಚ್ಚು ಕಡೆ ಮೊಟ್ಟೆ ಸ್ಯಾಂಪಲ್ಸ್ ಸಂಗ್ರಹ ಮಾಡಲಾಗಿದೆ. ಸಂಗ್ರಹವಾದ ಮೊಟ್ಟೆ ಸ್ಯಾಂಪಲ್ಸ್ ಗಳನ್ನು ಲ್ಯಾಬ್ ಟೆಸ್ಟ್ ಗೆ ಒಳಪಡಿಸಲುಆಹಾರ ಹಾಗೂ ಗುಣಮಟ್ಟ ಇಲಾಖೆ ಅಧಿಕಾರಿಗಳು ತೀರ್ಮಾನಿಸಿದ್ದಾರೆ.

ಮೊಟ್ಟೆಗಳಲ್ಲಿ ನೈಟ್ರೋಫ್ಯೂರಾನ್ ಎಂಬ ಔಷಧದ ಕಣಗಳು ಕಂಡ ಬಂದೀದೆ. ನೈಟ್ರೋಫ್ಯೂರಾನ್ ನಿಷೇಧಿತ ಔಷಧದ ಅಂಶ ಕ್ಯಾನ್ಸರ್‌ನಂತಹ ಅಪಾಯಕಾರಿ ಕಾಯಿಲೆಗಳಿಗೆ ಕಾರಣ ಎನ್ನಲಾಗಿದೆ. ಹೀಗಾಗಿ ಆಹಾರ ಇಲಾಖೆ ರಾಜ್ಯದ್ಯಂತ ಎಲ್ಲಡೆ ಮಟ್ಟೆಗಳ ಸ್ಯಾಂಪಲ್ ಕಲೆಕ್ಟ್ ಮಾಡುತ್ತಿದೆ.

ಆರ್ ಆರ್ ನಗರ, ಕೆಂಗೇರಿ, ಬಿಟಿಎಮ್ ಲೇಔಟ್, ಕೋರಮಂಗಲ, ಯಶವಂತಪುರ,ವಸಂತನಗರ, ಸಂಜಯನಗರ, ಚಾಮರಾಜಪೇಟೆ, ಹೆಬ್ಬಾಳ, ಕೆಆರ್ ಪುರಂ,ಮೈಸೂರು ರಸ್ತೆ ಸೇರಿದಂತೆ 50ಕ್ಕೂ ಹೆಚ್ಚು ಕಡೆ ಸ್ಯಾಂಪಲ್ಸ್ ಸಂಗ್ರಹ ಮಾಡಲಾಗಿದೆ.

ಕಳೆದ ಕೆಲ ತಿಂಗಳ ಹಿಂದೆ ಟೆಸ್ಟ್ ಮಾಡಿದಾಗ ಹಾನಿಕಾರಕ ಅಂಶ ಪತ್ತೆಯಾಗಿಲ್ಲ ಮೊಟ್ಟೆ ಹಾನಿಕಾರಕಗಳ ಮಾನದಂಡದ ಕುರಿತು ಕೇಂದ್ರದಿಂದಲೂ ಸಲಹೆ ಮಾರ್ಗಸೂಚಿ ಬಂದಿಲ್ಲ. ಆರೋಗ್ಯ ಇಲಾಖೆಯಿಂದ ಮೊಟ್ಟೆಗಳನ್ನು ಟೆಸ್ಟ್ ಗೆ ಒಳಪಡಿಸಲು ಸೂಚನೆ ನೀಡಲಾಗಿದೆ.

# ಸರಕಾರಿ ವೈದ್ಯಕೀಯ ಕಾಲೇಜು ಹೋರಾಟ: ಇಂದಿನಿಂದ ಅಹೋರಾತ್ರಿ ಧರಣಿ




**ವಿಜಯಪುರ, ಡಿ. 15–** ಡಿ.15ರಿಂದ ಸರಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಕೈಗೊಳ್ಳಲು ಹೋರಾಟಗಾರರು ನಿರ್ಧರಿಸಿದ್ದಾರೆ.

ವಿಜಯಪುರ ನಗರದ ಡಾ. ಬಿಆರ್ ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲೆಗೆ ಸರ್ಕಾರಿ ವೇದಿಕೆಯ ಮಹಾವಿದ್ಯಾಲಯ ಸ್ಥಾಪನೆಗಾಗಿ ಆಗ್ರಹಿಸಿ ಸರ್ಕಾರದ ಉದ್ದೇಶಿತ ಖಾಸಗಿಕರಣವನ್ನು ವಿರೋಧಿಸಿ ನಡೆಯುತ್ತಿರುವ ಧರಣಿ ಭಾನುವಾರ 88ನೇ ದಿನ ಪೂರೈಸಿದ್ದು, ಸರ್ಕಾರ ಜಿಲ್ಲೆಯ ಹೋರಾಟಗಾರರು ಹಾಗೂ ಜನರ ಬೇಡಿಕೆಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಹೋರಾಟ ಸಮಿತಿ ಪ್ರಮುಖರು ಇಂದು ಸತ್ಯಾಗ್ರಹ ವೇದಿಕೆಯಲ್ಲಿ ಸಭೆ ನಡೆಸಿ ಡಿ. 15 ರಿಂದ ಅಹೋರಾತ್ರಿ ಧರಣಿ ಪ್ರಾರಂಭಿಸಲು ನಿರ್ಣಯ ಕೈಗೊಂಡಿದ್ದಾರೆ .

ಈ ಸಂದರ್ಭದಲ್ಲಿ ಹೋರಾಟಗಾರರಾದ ಲಲಿತಾ ಬಿಜ್ಜರಗಿ, ಅಕ್ರಂ ಮಾಶಾಳಕರ, ಗಿರೀಶ ಕಲಘಟಗಿ, ಲಕ್ಷ್ಮಣ ಕಂಬಾಗಿ, ಸಿದ್ದರಾಮಯ್ಯ ಹಿರೇಮಠ, ಶ್ರೀಕಾಂತ ಕೊಂಡಗೂಳಿ, ಬಾಬುರಾವ ಬೀರಕಬ್ಬಿ, ಸಿದ್ದನಗೌಡ ಪಾಟೀಲ, ಬಸವರಾಜ ರೆಡ್ಡಿ, ಪ್ರಕಾಶ ಸಬರದ, ಶ್ರೀನಾಥ ಪೂಜಾರಿ, ಬಸಯ್ಯ ಮಠ, ಮಹಾದೇವಿ ಧರ್ಮಶೆಟ್ಟಿ, ಅರುಣಗೌಡ ತೇರದಾಳ, ಎಂ.ಎಸ್. ಬಗಲಿ, ರೇಣುಕಾ ಧನಶೆಟ್ಟಿ, ಲಾಯಪ್ಪ ಇಂಗಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಾಮನೂರು ಶಿವಶಂಕರಪ್ಪ ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.15–** ಸಿಂಧನೂರು ನಗರದ ಶಾಸಕರ ಕಾರ್ಯದಲ್ಲಿ ನಿನ್ನೆ ದೈವ ದೀನರಾಗಿರುವ ಅಖಿಲ ಭಾರತ ಲಿಂಗಾಯಿತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರು ಹಿರಿಯ ಶಾಸಕರಾದ ಶ್ರೀ ಶಾಮನೂರು ಶಿವಶಂಕರಪ್ಪ ರವರಿಗೆ ಗೌರವ ನಮನ ಸಲ್ಲಿಸಿ ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು .

ಈ ಸಂದರ್ಭದಲ್ಲಿ ಶ್ರೀ ಪಂಪನಗೌಡ ಬಾದರ್ಲಿ ಆರ್ ಡಿ ಸಿ ಸಿ ಬ್ಯಾಂಕ್ ನಿರ್ದೇಶಕರು. ಖಾಜಿ ಮಲ್ಲಿಕ್ ವಕೀಲರು ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಅನಿಲ್ ಕುಮಾರ್ ವೈ ನಗರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಗ್ಯಾರಂಟಿ ಅಧ್ಯಕ್ಷರು,

ಲಿಂಗಪ್ಪ ಎಂ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು,ಕಾಂಗ್ರೆಸ್ ಮುಖಂಡರಾದ ಎನ್. ಅಮರೇಶ್ ಮಲ್ಲನಗೌಡ



ಮಾವಿನಮಡಗು, ರಾಮನಗೌಡ ಮಲ್ಕಾಪುರ್ ವೀರಭದ್ರಗೌಡ ಕನಿಹಾಳ, ಛತ್ರಪ್ಪ, ಸಿದ್ದನಗೌಡ ವಿರುಪಾಪುರ ಎಚ್. ಭಾಷ ನಗರಸಭೆ ಸದಸ್ಯರು, ಅಮರಯ್ಯ ಸ್ವಾಮಿ ಹನುಮೇಶ ಮುಳ್ಳೂರು ಇಜೆ ಶಫುಯುಲ್ ಖಾನ್ ಜಿಲ್ಲಾ ಕೆಡಿಪಿ ಸದಸ್ಯರು, ಮತ್ತಿತರರು ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು,

ಯುವ ಮಾರ್ಗ
www.yuvamarga.com Yuva Marga yuva_marga_

## ಪೋಲಿಯೊ ಬೂತ್ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಡೆಯಿರಿ: ಡಾ.ಸುರೇಂದ್ರ ಬಾಬು

**ರಾಯಚೂರು,ಡಿ.15–** ಇದೆ ಡಿಸೆಂಬರ್ 21ರ ಭಾನುವಾರ ದಂದು ಹುಟ್ಟಿನಿಂದ ಐದು ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೊ ಲಸಿಕೆ ಹಾಕುವ ಪಲ್ಸ್ ಪೋಲಿಯೊ ಕಾರ್ಯಕ್ರಮ ರಾಯಚೂರು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದೆ. ನಗರ, ಪಟ್ಟಣಗಳಲ್ಲಿಯ ಜನತೆಯು ತಮ್ಮ ಮನೆಗಳಿಗೆ ಹತ್ತಿರದ ಪೋಲಿಯೊ ಬೂತ್ಗಳ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನರ್ ಸ್ಕ್ಯಾನ್ ಮಾಡಿ ತಮ್ಮಗೆ ಹತ್ತಿರದ ಬೂತ್ಗಳಲ್ಲಿ ಲಸಿಕೆ ಹಾಕಿ ಅಭಿಯಾನದಲ್ಲಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಪಾಲಕರು ನೋಡಿಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರ ಸಲಹೆಯಂತೆ ಈ ಬಾರಿ ರಾಯಚೂರು, ಮಾನವಿ, ದೇವದುರ್ಗ, ಲಿಂಗಸೂಗುರು, ಸಿಂಧನೂರು ನಗರ ಪ್ರದೇಶಗಳ ನಾಗರಿಕರಿಗೆ ಬೂತ್ಗಳ ಮಾಹಿತಿ ಕೊರತೆಯಾಗಬಾರದು ಎಂದು ಕ್ಯೂಆರ್ ಕೋಡ್ ಸ್ಕ್ಯಾನರ್ ಸಿದ್ದಪಡಿಸಲಾಗಿದ್ದು, ತಮ್ಮ ಮೊಬೈಲ್ಗಳ ಮೂಲಕ ಸ್ಕ್ಯಾನ್ ಮಾಡಿ ಬೂತ್ಗಳ ಮಾಹಿತಿ ಪಡೆದು ತಮಗೆ ಹತ್ತಿರದಲ್ಲಿರುವ ಬೂತ್ಗಳಲ್ಲಿ ಎರಡು ಹನಿ ಲಸಿಕೆಯನ್ನು ಮಗುವಿಗೆ ಹಾಕಿಸಿ ಪೋಲಿಯೋ ಮೇಲಿನ ನಮ್ಮ ಗೆಲುವನ್ನು ಮುಂದುವರೆಸಲು ಕೈಜೊಡಿಸುವಂತೆ ಕೋರಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ನಮ್ಮ ಭಾರತ ದೇಶದಲ್ಲಿ ಕೊನೆಯ ಪೋಲಿಯೋ ಪ್ರಕರಣ 2011 ಜನವರಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ವರದಿಯಾದ ನಂತರ ಕಳೆದ 14 ವರ್ಷಗಳಿಂದ ನಮ್ಮ ದೇಶದಲ್ಲಿ ಯಾವುದೇ ಪ್ರಕರಣ ವರದಿಯಾಗಿಲ್ಲ. ಆದರೂ ಸಹ ನೇರೆಯ ರಾಷ್ಟಗಳಲ್ಲಿ ಪ್ರಕರಣಗಳು ಇರುವುದರಿಂದ ಡಿಸೆಂಬರ್ 21 ರಂದು ದೇಶಾದ್ಯಾಂತ ಲಸಿಕೆ ಹಾಕಲಾಗುತ್ತಿದ್ದು, ನಮ್ಮ ಜಿಲ್ಲೆಯಲ್ಲಿ ಲಸಿಕೆ ಹಾಕಲು ತಂಡಗಳ ರಚನೆ ಮಾಡಲಾಗಿದ್ದು, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿಗಳಲ್ಲಿ ಮತ್ತು ಶಾಲೆಗಳಲ್ಲಿ ಹಾಗೂ ಕೊಳಚೆ ಪ್ರದೇಶ ಮುಂತಾದೆಡೆ ಬೂತ್ ತೆರೆಯಲಾಗುವುದು. ಇದಕ್ಕಾಗಿ ಈಗಿನಿಂದಲೆ ಗ್ರಾಮಗಳಲ್ಲಿ ಸಿಬ್ಬಂದಿಯವರು ಖುದ್ದು, ಮನೆ ಭೇಟಿ ನೀಡುತ್ತಿದ್ದಾರೆ. ಇದರೊಂದಿಗೆ ಸ್ಥಳೀಯ ಸಂಸ್ಥೆಗಳ ಕಸ ವಿಲೇವಾರಿ ವಾಹನ, ಆಟೊ ಮೂಲಕ ಮೈಕಿಂಗ್, ಜಾಗೃತಿ ಜಾಥಾ, ಸಾಮಾಜಿಕ ಜಾಲ ತಾಣಗಳ ಮೂಲಕ ನಿರಂತರ ಪ್ರಚಾರವನ್ನು ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಆರ್.ಸಿ.ಹೆಚ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಿಂದುಳಿದ ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ದಿಗೆ ಕ್ರೈಸ್ತ ಸಮುದಾಯದ ಶಿಕ್ಷಣ ಸಂಸ್ಥೆಗಳು ಶ್ರಮಿಸುತ್ತಿವೆ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.15–**ತಾಲೂಕಿನ ಪೋತ್ನಾಳ್ ಗ್ರಾಮದಲ್ಲಿನ ಸ್ನೇಹಾ ಜ್ಯೋತಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಶಾಸಕ ಹಂಪಯ್ಯನಾಯಕ ಮಾತನಾಡಿ ಗ್ರಾಮೀಣ ಭಾಗದಲ್ಲಿನ ಅರ್ಥಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ದಿಗೆ ಕ್ರೈಸ್ತ ಸಮುದಾಯದ ಶಿಕ್ಷಣ ಸಂಸ್ಥೆಗಳು ಶ್ರಮಿಸುತ್ತಿವೆ. ಪೋತ್ನಾಳ್ ಗ್ರಾಮದಲ್ಲಿ ಕಳೆದ 2006 ರಿಂದ ಸ್ನೇಹಾ ಜ್ಯೋತಿ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿ ಈ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ,ಶಿಸ್ತು,ಸಂಯಮವನ್ನು ಕಲಿಸುವ ಮೂಲಕ ಗ್ರಾಮೀಣ ಭಾಗದ ಮಕ್ಕಳ ಉಜ್ವಾಲ ಭವಿಷ್ಯವನ್ನು ರೂಪಿಸುತ್ತಿದೆ ಶಿಕ್ಷಣದಿಂದ ಮಾತ್ರ ಅಭಿವೃದ್ದಿ ಸಾಧ್ಯ ಸ್ನೇಹಾ ಜ್ಯೋತಿ ಶಿಕ್ಷಣ ಸಂಸ್ಥೆಯು ಇನ್ನು ಉನ್ನತ ಶಿಕ್ಷಣವನ್ನು ನೀಡುವ ನಿಟ್ಟನಲ್ಲಿ ಕಾಲೇಜು ಶಿಕ್ಷಣ ಪ್ರಾರಂಭಿಸಲಿ ಎಂದು ತಿಳಿಸಿದರು

ಯುವ ಮುಖಂಡರಾದ ರವಿ ಭೋಸರಾಜು ಮಾತನಾಡಿದರು, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಫಾ.ಸುನಿಲ್ ಕರ್ನೆಲಿಯೋ. ಫಾ. ಡಾ. ಚಾರ್ಲ್ಸ್ ಪುರ್ಟಾಡೊ ,.ಫಾ.ಎರಿಕ್ ಮತಾಯಸ್. ಫಾ. ಅಂತೋಣಿರಾಜ್, ಫಾ.ಸತೀಶ ಫೆರ್ನಾಂಡಿಸ್, ಫಾ. ಡೊಮಿನಿಕ್ ಸುನಿಲ್ ಲೋಬೋ, ಫಾ.ಪ್ರಶಾಂತ್, ಸಿಸ್ಟರ್ ಜೋಶ್ನಾ, ಗ್ರಾ.ಪಂ. ಅಧ್ಯಕ್ಷೆ ಲಕ್ಷ್ಮೀ ಈರಣ್ಣ, ಕಾಂಗ್ರೇಸ್ ಮುಖಂಡರಾದ ಸೈಯದ್ ಖಾಲಿದ್ ಗುರು, ನಾಗರಾಜ್ ತಡಕಲ್, ವಸಂತ ಕೊಡ್ಲಿ, ಮಹಾಂತೇಶ್ ಗುಜ್ಜಲ್,ಮೈಕಲ್ ಪೋತ್ನಾಳ್, ಸೈಯದ್ ನಜರುದ್ದೀನ್ ಖಾದ್ರಿ, ರಾಜ ಸುಭಾಷ ಚಂದ್ರ ನಾಯಕ್ , ಪಂಪನಗೌಡ ಪೋತ್ನಾಳ, ಚೆನ್ನಪ್ಪ, ಹಾಸನ ಭಾಷ್, ಮಹಾಂತೇಶ್ ನಾಯಕ್, ಖಾನ್ ಸಾಬ್, ಮೊದ್ದಿನ್ ಸಾಬ್, ಮಲ್ಲೇಶ್ ಜಗ್ಗಿ, ಚಂದ ಪಾಶ ಸೇರಿದಂತೆ ,ಸ್ನೇಹ ಜ್ಯೋತಿ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು

ಮುಖ್ಯೋಪಾಧ್ಯಾಯರು ಮಕ್ಕಳು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ವಿವಿಧ ಕೌಶಲಗಳನ್ನು ಮೈಗೂಡಿಸಿಕೊಳ್ಳಿ: ಚಂದ್ರಶೇಖರ ದೊಡ್ಡಮನಿ

ಯುವಮಾರ್ಗ ಸುದ್ದಿ



**ರಾಯಚೂರು,ಡಿ.15–** ವಿದ್ಯಾರ್ಥಿಗಳಿಗೆ ಕೌಶಲ್ಯ ಅತ್ಯವಶ್ಯಕವಾಗಿದೆ. ಕೌಶಲ್ಯ ಕುರಿತು ಸರ್ಕಾರವು ಮನಗಂಡು ಪ್ರೌಢ ಶಾಲಾ ಹಂತದಲ್ಲಿಯೇ ಎನ್‌ಎಸ್‌ಕ್ಯೂಎಫ್‌ನ್ನು ಪರಿಚಯಿಸಲಾಗಿದ್ದು, ವಿದ್ಯಾರ್ಥಿಗಳು ಸರ್ಕಾರಿ ನೌಕರಿಯನ್ನೇ ಅವಲಂಬಿಸದೇ ವಿವಿಧ ಕೌಶಲಗಳನ್ನು ಮೈಗೂಡಿಸಿಕೊಂಡು ಸ್ವಾವಲಂಬಿಗಳಾಗಿ ಬದುಕಬೇಕೆಂದು ಮಾನವಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಚಂದ್ರಶೇಖರ ದೊಡ್ಡಮನಿ ಅವರು ಹೇಳಿದರು.

ಇತ್ತೀಚಿಗೆ ಜಿಲ್ಲೆಯ ಮಾನ್ವಿ ಪಟ್ಟಣದ ಬಸವ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ವತಿಯಿಂದ 2025–26ನೇ ಪಿಎಮ್‌ಎನ್‌ಎಮ್ ಯೋಜನೆಯಡಿಯಲ್ಲಿ ಶಿಶಿಕ್ಷು ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಗ್ರಾಮೀಣ ಭಾಗದ ಬಡ, ಮದ್ಯಮ ವರ್ಗದ ವಿದ್ಯಾರ್ಥಿಗಳು ಐಟಿಐ ನಂತಹ ವೃತ್ತಿ ಶಿಕ್ಷಣದ ಕಡೆ ಆಸಕ್ತಿ ವಹಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಅವರ ಆರ್ಥಿಕ ಸ್ಥಿತಿಗತಿಯ ಸುಧಾರಣೆಗೆ ಹಾಗೂ ಉತ್ತಮ ಜೀವನ ನಿರ್ವಹಣೆಗೆ ಅನುಕೂಲಕರವಾಗಿದೆ ಎಂದರು.

ಈ ವೇಳೆ ತಾಲೂಕು ನೌಕರರ ಸಂಘದ ಅಧ್ಯಕ್ಷರಾದ ಸುರೇಶ ಕುಮಾರ ಕುರ್ಡಿ ಅವರು ಮಾತನಾಡಿ, ನಾವು ವಿದ್ಯಾರ್ಥಿಗಳಾಗಿದ್ದಾಗ ಜಿಲ್ಲೆಗೆ ಕೇವಲ ಒಂದೇ ಒಂದು ಸರ್ಕಾರಿ ಐಟಿಐ ಕಾಲೇಜು ಇತ್ತು, ಇಂದು ಸರ್ಕಾರ ಪ್ರತಿ ತಾಲೂಕು ಮತ್ತು ಗ್ರಾಮೀಣ ಭಾಗದಲ್ಲಿಯೂ ಕೂಡ ಸರ್ಕಾರಿ ಐಟಿಐ ಕಾಲೇಜುಗಳನ್ನು ಪ್ರಾರಂಬಿಸುವ ಮೂಲಕ ಗ್ರಾಮೀಣ ಭಾಗದ ಬಡ ಮದ್ಯಮ ವರ್ಗಗಳಿಗೆ ಹಾಗೂ ಎಂಬಿಬಿಎಸ್ ಮತ್ತು ಇಂಜಿನೀಯರಿಂಗ್ ನಂತಹ ಉನ್ನತ ಶಿಕ್ಷಣ ಪಡೆಯಲು ಸಾದ್ಯವಾಗಿದೆ. ವಿದ್ಯಾರ್ಥಿಗಳಿಗೆ ಐಟಿಐ ಜೀವನ ಸಂಜೀವಿನಿ ಯಾಗಿದೆ ಎಂದರು.

ಶಿಶಿಕ್ಷು ಮೇಳದಲ್ಲಿ ಜೆಎಸ್‌ಡಬ್ಲ್ಯೂ ತೋರಣಗಲ್ಲು, ಹೋಂಡಾ ಕಂಪನಿ ಬೆಂಗಳೂರು, ಇ2ಇ ಕನ್ಸಲ್ಟೆನ್ಸಿ ರಾಯಚೂರು ಹಾಗೂ ಇತರ ವಿವಿಧ ಉದ್ದಿಮೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲೆಯ ವಿವಿಧ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಐಟಿಐ ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಈಗಾಗಲೇ ಐಟಿಐ ಉತ್ತೀರ್ಣರಾದ ತರಬೇತಿದಾರರು ಮತ್ತು ಪಿಯುಸಿ ಹಾಗೂ ಪದವಿಯಲ್ಲಿ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಮೇಳದಲ್ಲಿ ಭಾಗವಹಿಸಿದ್ದರು.

40ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೇಮಕಾತಿ ಪತ್ರ: ಪಿಎಮ್‌ಎನ್‌ಎಮ್ ಯೋಜನೆಯಡಿಯಲ್ಲಿ ಶಿಶಿಕ್ಷು ಮೇಳವನ್ನು ಹಮ್ಮಿಕೊಳ್ಳಲಾಗಿತ್ತು. ಮೇಳಕ್ಕೆ ಆಗಮಿಸಿದ್ದ ವಿವಿಧ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಿದರು. ಮೇಳದಲ್ಲಿ ಸುಮಾರು 60 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಪತ್ರವನ್ನು ನೀಡಲಾಯಿತು.

ಇದೇ ಸಂದರ್ಭದಲ್ಲಿ ಮಾನವಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ರುದ್ರಗೌಡ ಮಾಲಿಪಾಟೀಲ್, ಬಸವ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ತಿಪ್ಪಣ್ಣ ಹೊಸಮನಿ, ತಾಲೂಕು ನೌಕರರ ಸಂಘದ ನಿರ್ದೇಶಕರಾದ ಮುಕ್ಕಣ್ಣ .ಕೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸಿಬ್ಬಂದಿಗಳಾದ ಗಂಗಪ್ಪ, ಶರಣಪ್ಪ ಹಿಪ್ಪಲದಿನ್ನಿ, ನಾಗರಾಜ ಪಿ. ಸೇರಿದಂತೆ ಜಿಲ್ಲೆಯ ವಿವಿಧ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಇದ್ದರು.

# ಕಲ್ಮಠ ಪದವಿಪೂರ್ವ ಕಾಲೇಜಿನ ಎನ್‌.ಎಸ್‌.ಎಸ್‌. ಘಟಕದ ಸಮಾರೋಪ ಸಮಾರಂಭ




ಯುವಮಾರ್ಗ ಸುದ್ದಿ

**ಮಾನ್ವಿ,ಡಿ.15–**ತಾಲೂಕಿನ ತಮ್ಮಾಪುರ ಗ್ರಾಮದಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮಾನ್ವಿಯ ಕಲ್ಮಠ ಪದವಿಪೂರ್ವ ಕಾಲೇಜಿನ ಎನ್.ಎಸ್.ಎಸ್. ಘಟಕದ ವಿಶೇಷ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಗುಂಡಪ್ಪ ತಮ್ಮಾಪುರ ವಿಶೇಷ ಉಪನ್ಯಾಸ ನೀಡಿ ಯುವಕರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ದೊರೆಯುವ ಸಮಯವನ್ನು ಸದುಪಯೋಗ ಪಡಿಸಿಕೊಂಡಲ್ಲಿ ಜೀವನದಲ್ಲಿ ಉನ್ನತ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಯುವ ಸಮುದಾಯ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಿದ ದೇಶ ಭಕ್ತರಾದ ಭಗತ್ ಸಿಂಗ್, ರಾಜಗುರು,ಸುಖದೇವ್ ರಂತಹವರನ್ನು ತಮ್ಮ ಅದರ್ಶವಾಗಿಸಿಕೊಳ್ಳ ಬೇಕು ಹಾಗೂ ಸಮಾಜದಲ್ಲಿ ಅಗತ್ಯವಿರುವವರಿಗೆ ಸಹಾಯವನ್ನು ಮಾಡುವ ಮೂಲಕ ಅದರ್ಶ ವ್ಯಕ್ತಿಗಳಾಗಬೇಕು ಎಂದು ತಿಳಿಸಿದರು.

ಕಲ್ಮಠ ಕಾಲೇಜಿನ ಪ್ರಾಚಾರ್ಯರಾದ ಎಸ್.ಎಸ್.ಪಾಟೀಲ್ ಮಾತನಾಡಿ ಗ್ರಾಮಸ್ಥರ ಸಹಾಕರದಿಂದ ಎನ್.ಎಸ್.ಎಸ್.ಶಿಬಿರ ಯಶಸ್ವಿಯಾಗುವುದಕ್ಕೆ ಸಾಧ್ಯವಾಗಿದೆ ಶಿಬಿರದ ಅನುಭವಗಳನ್ನು ವಿದ್ಯಾರ್ಥಿಗಳು ಪಡೆದುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಕಾರ್ಯಕ್ರಮದಲ್ಲಿ ಶ್ರೀ ರೇಣುಕಾ ಎಲ್ಲಮ್ಮ ದೇವಿ ಶಕ್ತಿ ಪೀಠದ ಶ್ರೀಕುಬೇರಪ್ಪ ಸ್ವಾಮಿಗಳು , ಎನ್‌ಎಸ್‌ಎಸ್ ಕಾರ್ಯ ಕ್ರಮಾಧಿಕಾರಿಗಳಾದ ನರಸಣ್ಣ ,ಶಾಲೆಯ ಮುಖ್ಯಗುರುಗಳಾದ ಹಂಪಣ್ಣ, ಸಹ ಶಿಕ್ಷಕರಾದ ತಿಮ್ಮಪ್ಪ ,ಮುಖಂಡರಾದ ಉರು ಕುಂದಪ್ಪ ತಮ್ಮಾಪುರ, ಗ್ರಾ.ಪಂ. ಸದಸ್ಯರಾದ ಲಕ್ಷ್ಮಿ ರಾಘವೇಂದ್ರ, ಕಲ್ಮಠ ವಿದ್ಯಾ ಸಂಸ್ಥೆಯ ಹಳೆಯ ವಿದ್ಯಾಥಿ ್ಗಳಾದ ಬಂಗಾರಪ್ಪ, ತಿಮ್ಮಯ್ಯ, ಉಪನ್ಯಾಸಕರಾದ ಮಾರ್ಟಿನ್, ಗೌರಿ, ಸಿದ್ದಪ್ಪ ಸೇರಿದಂತೆ ಇನ್ನಿತರರು ಇದ್ದರು.

# ಮಾರೆಮ್ಮ ದೇವಿ ಹಾಗೂ ಶ್ರೀ ಆಂಜನೇಯ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಶಾಸಕರಿಂದ ಚಾಲನೆ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.15–** ತಾಲೂಕಿನ ದದ್ದಲ್ ಗ್ರಾಮದಲ್ಲಿನ ಗ್ರಾಮದೇವತೆ ಮಾರೆಮ್ಮ ದೇವಿ ಹಾಗೂ ಶ್ರೀ ಆಂಜನೇಯ ಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಶಾಸಕ ಹಂಪಯ್ಯ ನಾಯಕ ಹಾಗೂ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಶ್ರೀ ಮಹಾರ್ಷಿ ವಾಲ್ಮೀಕಿ ನಿಗಮದ ರಾಜ್ಯಧ್ಯಾಕ್ಷರಾದ ಬಸವನಗೌಡ ದದ್ದಲ್ ಚಾಲನೆ ನೀಡಿದರು.ಶಾಸಕ ಹಂಪಯ್ಯ ನಾಯಕ ಗ್ರಾಮಸ್ಥರಿಂದ ಮನವಿ ಸ್ವಿಕರಿಸಿ ಮಾತನಾಡಿ ಗ್ರಾಮದ ಜನರ ಬೇಡಿಕೆಯಂತೆ ಕಾತರಕಿ ಯಿಂದ ದದ್ದಲ್ ಗಡಿಯವರೆಗಿನ 2.5 ಕಿಲೋಮಿಟರ್ ರಸ್ತೆ ಕಾಮಗಾರಿಯನ್ನು 3 ಕೋಟಿ ರೂ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು ಅದಷ್ಟು ಶೀಘ್ರವಾಗಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿ ಪೂರ್ಣ ಗೊಳಿಸುವಂತೆ ಲೋಕೋಪರ್ಯೋಗಿ ಇಲಾಖೆ ಅಭಿಯಂತರರಿಗೆ ಸೂಚಿಸಿದರು ಹಾಗೂ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಬರವಸೆ ನೀಡಿದರು.

ಗ್ರಾಮದ ಮುಖಂಡರಾದ ಅಯ್ಯನಗೌಡ ನಾಯಕ್, ಮೌನೇಶ್ ನಾಯಕ್, ಗೋವಿಂದ್ ರಾಜ್, ಸೇರಿದಂತೆ ಇನ್ನಿತರರು ಇದ್ದರು.

## ಡಿ.22ರಿಂದ ಜಿಲ್ಲೆಯ ವಿವಿಧತಾಲ್ಲೂಕಿನಲ್ಲಿ ಜೆಸ್ಕಾಂ ಗ್ರಾಹಕರ ಕುಂದುಕೊರತೆ ತ್ರೈಮಾಸಿಕ ಸಭೆ

**ರಾಯಚೂರು,ಡಿ.15–**ಜಿಲ್ಲೆಯ ವಿವಿಧ ತಾಲ್ಲೂಕಿನ ಜೆಸ್ಕಾಂ ಉಪ ವಿಭಾಗಗಳಲ್ಲಿ ಗ್ರಾಹಕರ ಕುಂದುಕೊರೆತೆ ತ್ರೈಮಾಸಿಕ ಸಭೆಯನ್ನು ಜೆಸ್ಕಾಂ ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ವಿವಿಧ ದಿನಾಂಕಗಳಂದು ಹಮ್ಮಿಕೊಳ್ಳಲಾಗಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ.

ಡಿಸೆಂಬರ್ 22ರ ಬೆಳಿಗ್ಗೆ 10ಗಂಟೆಗೆ ರಾಯಚೂರು ನಗರ ಉಪ ವಿಭಾಗ–1 ಹಾಗೂ ಮಧ್ಯಾಹ್ನ 3ಗಂಟೆಗೆ ಉಪ ವಿಭಾಗ–2, ಡಿಸೆಂಬರ್ 29ರ ಬೆಳಿಗ್ಗೆ 10ಗಂಟೆಗೆ ದೇವದುರ್ಗ ಹಾಗೂ ಮಧ್ಯಾಹ್ನ 3ಗಂಟೆಗೆ ಸಿರವಾರ, ಡಿಸೆಂಬರ್ 30ರ ಬೆಳಿಗ್ಗೆ 10ಗಂಟೆಗೆ ಲಿಂಗಸುಗೂರು ಹಾಗೂ ಮಧ್ಯಾಹ್ನ 3ಗಂಟೆಗೆ ಮಸ್ಕಿಯಲ್ಲಿ ನಡೆಯುವ ಗ್ರಾಹಕರ ಕುಂದುಕೊರತೆ ತ್ರೈಮಾಸಿಕ ಸಭೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗಿಯಾಗುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಹನಗಳ ಸರಬರಾಜಿಗೆ ಅರ್ಹ ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ರಾಯಚೂರು,ಡಿ.15–**ಇಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸಂಚಾರಿ ಆರೋಗ್ಯ ಘಟಕಗಳಿಗೆ ಅವಶ್ಯಕವಾದ ಒಟ್ಟು 06 ವಾಹನಗಳು ತಾಲೂಕು ಮಟ್ಟದಲ್ಲಿ ಸಂಚಾರಿ ಆರೋಗ್ಯ ತಂಡಗಳಿಗೆ ವಾಹನಗಳನ್ನು ಸರಬರಾಜು ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2026ರ ಜನವರಿಯಿಂದ 2026ರ ಮಾರ್ಚ ತಿಂಗಳಿನವರೆಗೂ ಒಟ್ಟು ಮೂರು ತಿಂಗಳ ಅವಧಿಗೆ ಸೇವೆಯನ್ನು ಒದಗಿಸಬೇಕು. ಆಸಕ್ತರು ಡಿಸೆಂಬರ 18 ರ ಸಂಜೆ 5:30 ಗಂಟೆಯೊಳಗೆ ಅರ್ಜಿಗಳನ್ನು ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ, ಡಿ.ಪಿ.ಎಂ.ಯು. ವಿಭಾಗಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನವರಿ 2ರಂದು ತ್ರೈಮಾಸಿಕ ಕೆಡಿಪಿ ಸಭೆ

**ರಾಯಚೂರು,ಡಿ.15–** ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ಆರ್.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಜನವರಿ 2ರಂದು ಬೆಳಗ್ಗೆ 11 ಗಂಟೆಗೆ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ.

ಪ್ರಗತಿ ಮಾಹಿತಿಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ಕಡ್ಡಾಯ ಹಾಜರಾಗುವಂತೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 17ರಂದು ವಿವಿಧ ದಿನಾಚರಣೆಯ ಪೂರ್ವಭಾವಿ ಸಭೆ

**ರಾಯಚೂರು,ಡಿ.15–** ಜಿಲ್ಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ಡಿಸೆಂಬರ್29 ರಂದು ವಿಶ್ವಮಾನವ ದಿನಾಚರಣೆ ಹಾಗೂ ಜನವರಿ 01ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ನಡೆಯಲಿವೆ. ಈ ದಿನಾಚರಣೆ ಅಂಗವಾಗಿ ಡಿಸೆಂಬರ್ 17ರ ಮಧ್ಯಾಹ್ನ 3.30ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ವಿವಿಧ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಬಹುದಾಗಿದೆ.ಅಂದು ನಡೆಯುವ ಪೂರ್ವಭಾವಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಸಮಾಜದ ಮುಖಂಡರುಗಳು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂಜಾಟ: 8 ಜನರ ಬಂಧನ

**ಕಲಬುರಗಿ,ಡಿ.15–**ತಾಲ್ಲೂಕಿನ ಸಿಂದಗಿ (ಬಿ) ಗ್ರಾಮದ ಹತ್ತಿರವಿರುವ ನಿರ್ಮಲಾಬಾಯಿ ಮಾಲಿಪಾಟೀಲ ಅವರ ಹೊಲದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಎಸಿಪಿ ಜೇಮ್ಸ್ ಮಿನೇಜಸ್, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ, ಶಿವುಕುಮಾರ, ಅಶೋಕ ಕಟಕೆ ಮತ್ತು ನಾಗರಾಜ ಅವರು ದಾಳಿ ನಡೆಸಿ 8 ಜನರನ್ನು ಬಂಧಿಸಿದ್ದಾರೆ. ರೇವಣಸಿದ್ದಪ್ಪ ಆವಂಟಗಿ, ಶರಣಬಸಪ್ಪ ಮಾಲಿಪಾಟೀಲ, ವಿಶಾಲ ಗೌಳಿ, ಶಿವಾನಂದ ಬಿರಾದಾರ, ಈಶ್ವರಾಜ ಆವಂಟಗಿ, ಅಣವೀರಪ್ಪ ಮಾಲಿಪಾಟೀಲ, ವಿರೇಶ ಆವಂಟಗಿ ಮತ್ತು ಆನಂದ ಜಮದಾರಖಾನಿ ಎಂಬುವವರನ್ನು ಬಂಧಿಸಿ 20,500 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H